# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಸಮಸ್ತ ಚಿತ್ರದುರ್ಗ ನಮ್ಮಜನ ಪತ್ರಿಕೆ ಓದುಗರಿಗೆ ದಸರಾ ಹಬ್ಬದ ಶುಭಾಶಯಗಳು. — ಸಂಪಾದಕ

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 02 ಸಂಚಿಕೆ – 81 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಚಿತ್ರದುರ್ಗ | ದಿನಾಂಕ: 11–10–2024 ಶುಕ್ರವಾರ | ಪುಟ: 4 | ಬೆಲೆ : ರೂ.2–00
Volume - 02 Issue - 81 | RNI No: KARKAN/2023/88462 | Chitradurga | Date: 11-10-2024 Friday | Page: 4 | Price: Rs. 2-00



ಒಳಪುಟದ ಸುದ್ದಿಗಳು
ಬೆಳೆ ಏರಿಕೆ ನಡುವೆಯೂ ವಿಜಯದಶಮಿಗೆ ಸಿದ್ಧತೆ: ಜನರಲ್ಲಿ ಕುಂದದ ಉತ್ಸಾಹ 2
ಕ್ಷಯರೋಗದ ಬಗ್ಗೆ ಸಾರ್ವಜನಿಕರಿಗೆ ವ್ಯಾಪಕ ಜಾಗೃತಿ ಮೂಡಿಸಿ: ಡಿಸಿ 3
ಮಾತುಗಳು ಕೂಡಿದರೆ ನುಡಿ ತಾಕಿದರೆ ಕಿಡಿ! 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಹೊಸದುರ್ಗದಲ್ಲಿ ಹದ ಮಳೆ: ರೈತರ ಮುಖದಲ್ಲಿ ಕಳೆ

» ಹೊಸದುರ್ಗ

:ಕಳೆದ ಎರಡು ದಿನಗಳಿಂದ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಉತ್ತಮ ಮಳೆಯಾಗಿರುವ ಬಗ್ಗೆ ವರದಿಯಾಗಿದೆ. ತಾಲ್ಲೂಕಿನ ಮತ್ತೋಡು ಹೋಬಳಿ ಹಾಗೂ ಮಾಡಿದಕೆರೆ ಹೋಬಳಿ ಕೆಲ ಹಳ್ಳಿಗಳಲ್ಲಿ ಮಳೆಯಾಗಿದೆ. ಪಟ್ಟಣ ಕಸಬಾ ಹೋಬಳಿ ಸೇರಿದಂತೆ ಹಲವೆಡೆ ಗುರುವಾರ ಸಂಜೆ 6.30 ಗಂಟೆಯಿಂದ ಯಾವುದೇ ಸೂಚನೆ ಇಲ್ಲದೆ 7.30 ರವರೆಗೆ ರಭಸದ ಮಳೆ ಸುರಿಯಿತು. ಹಿಂದಿನ ದಿನ ಬುಧವಾರ ರಾತ್ರಿಯೂ ಸಹಾ ಉತ್ತಮ ಮಳೆಯಾಗಿದೆ, ಪ್ರಸ್ತುತ ಬೆಳೆಗಳಾದ ಶೇಂಗಾ, ರಾಗಿ, ಹುರುಳಿ ಕಾಳು ಬೆಳೆಯುವ ಹಂತದಲ್ಲಿದ್ದು, ಮಳೆಯ ಅವಶ್ಯಕತೆಯಿತ್ತು. ಹಲವೆಡೆ ನೆಲದಲ್ಲಿಯೇ ಒಣಗಿ ಹೋಗುವ ಸ್ಥಿತಿ ತಲುಪಿದ್ದವು,ತಾಲೂಕಿನ ಹಲವೆಡೆ ಬೆಳೆಯಲಾಗಿದ್ದ ಈರುಳ್ಳಿ ಬೆಳಯನ್ನ ಈಗಾಗಲೆ ಕಟಾವು ಮಾಡಿ ಮನೆ ಸೇರಿಸಲಾಗಿದ್ದು ಇನ್ನು ಕೆಲವು ಕಡೆ ಈರುಳ್ಳಿ ಕೀಳುವ ನಿಟ್ಟಿನಲ್ಲಿ ರೈತರು ಚಿಂತನೆ ನಡೆಸುತ್ತಿದ್ದಾರೆ ಆದರೂ ಸಹಾ ಶೇ.75 ರಷ್ಟು ಭಾಗ ಈರುಳ್ಳಿ ಕಿತ್ತಿರುವುದು ರೈತರಲ್ಲಿ ಸಮಾದಾನ ತಂದಿದೆ, ಇಂತಹ ಸಂದರ್ಭದಲ್ಲಿ ಇತರೆ ಬೆಳೆಗಳಿಗೆ ಹಾಗೂ ಬಹು ಮುಖ್ಯವಾಗಿ ಅಡಿಕೆ ಬಾಳೆ ಬೆಳೆಗೆ ಮಳೆಯಾಗುತ್ತಿರುವುದು ರೈತರ ಮೊಗದಲ್ಲಿ ಸಂತಸ ಮೂಡಿಸಿದೆ.

### ವಸತಿ ಮಹಾಮಂಡಳಿ ರಾಜ್ಯ ನಿರ್ದೇಶಕರಾಗಿ ಆದಿಭಾಸ್ಕರಯ್ಯ ಶೆಟ್ಟಿ ಆಯ್ಕೆ



» ಚಳ್ಳಕೆರೆ

ಕರ್ನಾಟಕ ರಾಜ್ಯ ವಸತಿ ಮಹಾಮಂಡಳ ರಾಜ್ಯ ನಿರ್ದೇಶಕ ಆಯ್ಕೆಗಾಗಿ ಬೆಂಗಳೂರಿನ ಕೇಂಧ್ರ ಕಚೇರಿಯಲ್ಲಿ ಅ.10ರಂದು ಚುನಾವಣೆ ನಡೆದಿದ್ದು, ಚುನಾವಣಾಧಿಕಾರಿಗಳಾಗಿ ಡಾ.ದೇವರಾಜ್ ರಾಜ್ಯ ಮಂಡಳಿಗೆ ನಿರ್ದೇಶಕರಾಗಿ ಆಯ್ಕೆಯಾದವರ ಪಟ್ಟಿಯನ್ನು ಪ್ರಕಟಿಸಿ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಚಳ್ಳಕೆರೆ ಟೌನ್‌ಗೃಹ ನಿರ್ಮಾಣ ಸಂಘದ ಅಧ್ಯಕ್ಷರು, ಸಹಕಾರಿ ಕ್ಷೇತ್ರದ ಹಿರಿಯ ದುರೀಣರಾದ ಸಿ.ಬಿ.ಆದಿಭಾಸ್ಕರಯ್ಯಶೆಟ್ಟಿ ಐದು ವರ್ಷಗಳ ಅವಧಿಗೆ ಕರ್ನಾಟಕ ರಾಜ್ಯ ವಸತಿಮಹಾಮಂಡಳಿಯ ರಾಜ್ಯ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಚುನಾವಣಾಧಿಕಾರಿ ದೇವರಾಜ್ ಆಯ್ಕೆಯಾದ ಆದಿಭಾಸ್ಕರಯ್ಯಶೆಟ್ಟಿ ಯವರಿಗೆ ಪ್ರಮಾಣ ಪತ್ರ ವಿತರಿಸಿದರು.

### ಬೃಹತ್ ಉದ್ಯೋಗ ಮೇಳ

» ಚಿತ್ರದುರ್ಗ

ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಾಲಯದ ಅಧೀನದಲ್ಲಿ ಬರುವ ಸ್ವಾಯತ್ತ ವೈಜ್ಞಾನಿಕ ಸಂಸ್ಥೆಯಾದ ರಾಷ್ಟ್ರೀಯ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಸಂಸ್ಥೆ ಯು ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ನ್ಯಾಷನಲ್ ಕರಿಯರ್ ಸರ್ವಿಸ್ , ರಾಜ್ಯ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಸಹಕಾರದೊಂದಿಗೆ ಇದೇ ಅ.20ರಂದು ಬೆಂಗಳೂರು ನಗರ ಜಿಲ್ಲೆಯ ರಾಜಾಜಿನಗರ, 2ನೇ ಬ್ಲಾಕ್, 28ನೇ ಕ್ರಾಸ್ ರಸ್ತೆ ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಮಹಾವಿದ್ಯಾಲಯದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ರಾಜ್ಯದ ಎಲ್ಲಾ ವಲಯಗಳಿಂದ ಸುಮಾರು 100ಕ್ಕೂ ಹೆಚ್ಚಿನ ಪ್ರತಿಷ್ಠಿತ ಬೃಹತ್, ಮಧ್ಯಮ, ಸಣ್ಣ ಉದ್ಯೋಗದಾತರ ಸಂಸ್ಥೆಗಳು ಭಾಗವಹಿಸುವ ನಿರೀಕ್ಷೆ ಇದೆ. ರಾಜ್ಯದ ಯುವ ಜನತೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಉದ್ಯೋಗಾಕಾಂಕ್ಷಿ, ಉದ್ಯೋಗದಾತರು https://jobfair.calicut.nielit.in/ ಗೆ ಭೇಟಿ ನೀಡಿ ತಮ್ಮ ಸ್ವ-ವಿವರಗಳನ್ನು ಉಚಿತವಾಗಿ ನೊಂದಣಿ ಮಾಡಿಸಿ, ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ತಿಳಿಸಿದ್ದಾರೆ.

## ಯುವ ಉದ್ಯಮಿ ಸದ್ಗುರು ಪ್ರದೀಪ್ ಅಭಿಮತ

# "ಭಾರತದ ಹಳ್ಳಿ ಹಳ್ಳಿಗೂ ಸರಕು ಸಾರಿಗೆ ವ್ಯವಸ್ಥೆ ಕೊಂಡೊಯ್ದ ರತನ್ ಟಾಟಾ "

» ಹೊಸದುರ್ಗ

ಭಾರತದ ಬಲಿಷ್ಠ ಉದ್ಯಮ ಕ್ಷೇತ್ರವನ್ನು ಜಗತ್ತಿಗೆ ಪರಿಚಯಿಸಿದ ಧೀಮಂತ ಉದ್ಯಮಿ ರತನ್ ಟಾಟಾ ಅಗಲಿಕೆ ಭಾರತದ ಉದ್ಯಮ ಕ್ಷೇತ್ರಕ್ಕೆ ತುಂಬಲಾರದ ನಷ್ಟ ತಂದಿದೆ. ರತನ್ ಟಾಟಾ ಭಾರತದ ಉದ್ಯಮಿಗಳಿಗೆ ಸ್ಪೂರ್ತಿಯಾಗಿ ನಿಂತಿದ್ದಾರೆ ಜೇಮ್ ಶೆಟ್ ಜಿ ಟಾಟಾ ಕಟ್ಟಿದ ಟಾಟಾ ಉದ್ಯಮವನ್ನು ಬಾನೆತ್ತಕ್ಕೆ ಬೆಳೆಸಿ ತನ್ನ ಬದುಕಿನಲ್ಲಿ ಸರಳತೆಯನ್ನ ಮೈಗೂಡಿಸಿಕೊಂಡು ಬೆಳೆದವರು ಸರಕು ವಾಹನಗಳು ಇಲ್ಲದೆ ಬರದಾಡುತ್ತಿರುವ ಗ್ರಾಮೀಣ ಭಾಗದ ರೈತ ಕುಟುಂಬಗಳಿಗೆ ತಾವು ಬೆಳೆದ ಧಾನ್ಯಗಳನ್ನು ಮಾರುಕಟ್ಟೆಗೆ ತರಲು ಟಾಟಾ ಏಸ್ ಪರಿಚಯಿಸಿದ ಕೀರ್ತಿ ಭಾರತದ ಹೆಸರಾಂತ ಉದ್ದಿಮೆ ಜೆ ಎನ್ ರತನ್ ಟಾಟಾ ರವರಿಗೆ ಸಲ್ಲುತ್ತದೆ ಎಂದು ಯುವ ಉದ್ಯಮಿ ಸದ್ಗುರು ಪ್ರದೀಪ್ ತಿಳಿಸಿದರು.

ನಗರದ ಸದ್ಗುರು ಆಯುರ್ವೇದ ಕಂಪನಿಯಲ್ಲಿ ನಡೆದ ಜೇಮ್ ಶೇಟ್ ಜಿ ರತನ್ ಡಾಟಾರವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು ದೇಶದ ಸಾಮಾನ್ಯ ಪ್ರಜೆಯು ಕಾರಿನಲ್ಲಿ ಓಡಾಡಬೇಕೆಂಬ ಕನಸು ಕಂಡು ಜನಸಾಮಾನ್ಯರಿಗಾಗಿ ಕಡಿಮೆ ವೆಚ್ಚದಲ್ಲಿ ನ್ಯಾನೊ ಕಾರ್ ಮಾರುಕಟ್ಟೆಗೆ ತಂದರು. ಬಡ ಕುಟುಂಬದ ಸಾಮಾನ್ಯ ವ್ಯಕ್ತಿಯು ತನ್ನ ಮಕ್ಕಳೊಂದಿಗೆ ನ್ಯಾನೋ ಕಾರ್ ನಲ್ಲಿ ಓಡಾಡುವಂತೆ ಮಾಡಿದರು.. ರತನ್ ಡಾಟರ್ ಅವರು ತಮಗೆ ಬರುತ್ತಿದ್ದ ಆದಾಯದಲ್ಲಿ ಬಹುಪಾಲು ಹಣವನ್ನು ಸಾರ್ವಜನಿಕವಾಗಿ ಶಿಕ್ಷಣ ಸಂಸ್ಥೆ, ಆರೋಗ್ಯ, ಕ್ಷೇತ್ರಕ್ಕೆ ವಿನಿಯೋಗಿಸುತ್ತಿದ್ದರು. ಪ್ರಪಂಚದ ಬೇರೆ ಬೇರೆ ಪ್ರತಿಷ್ಠಿತ ಕಂಪನಿಗಳನ್ನು ಖರೀದಿಸಿ ಭಾರತದ ಉದ್ಯಮಿಗಳೂ ಪ್ರಬಲರು ಎಂದು ವಿಶ್ವದ ಮಾರುಕಟ್ಟೆಗೆ ತಿಳಿಸಿದರು.. ನಮ್ಮ ದಿನ ನಿತ್ಯದ ಆಹಾರದಲ್ಲಿ ಬಳಸುವ ಒಪ್ಪಿನಿಂದಲೂ ಹಿಡಿದು ಬಾನೆತ್ತರದಲ್ಲಿ ಹಾರುವ ವಿಮಾನಗಳನ್ನು ಸಹ ಟಾಟಾ ಸಮಸ್ತ ಸಂಸ್ಥೆ ಮಾರುಕಟ್ಟೆಗೆ ತಂದಿದೆ. ರತನ್ ಡಾಟಾರವರು ಭಾರತದ ರಾಷ್ಟ್ರ ಭಕ್ತ ಉದ್ಯಮಿ ಯಾಗಿದ್ದರು ಎಂದರು..



ಶ್ರದ್ಧಾಂಜಲಿ ಸಭೆಯಲ್ಲಿ ಪುರಸಭಾ ಸದಸ್ಯರಾದ ಡಾಕ್ಟರ್ ಸ್ವಾತಿ ಪ್ರದೀಪ್,ನಿವೃತ್ತ ಯೋಧ ಗೋವಿಂದ ಸ್ವಾಮಿ ,ಸಮಾಜ ಸೇವಕ ತುಂಬಿನಕೆರೆ ಬಸವರಾಜ್ ಅಣ್ಣಪ್ಪ, ತಿಪ್ಪೇಶ್ ಹಾಗೂ ಸದ್ಗುರು ಸಂಸ್ಥೆಯ ನೂರಾರು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ದುರ್ಗೋತ್ಸವ: ವರ್ಷಾಂತ್ಯದೊಳಗೆ ಆಚರಿಸಿ

» ಚಿತ್ರದುರ್ಗ

ಬರುವ ಡಿಸೆಂಬರ್‌ನೊಳಗೆ ದುರ್ಗೋತ್ಸವವನ್ನು ಮಾಡದೇ ಇದ್ದರೆ ನಮ್ಮ ಸಂಘಟನೆಯಿಂದ ಉಗ್ರವಾದ ಹೋರಾಟ ಮಾಡಲಾಗುವುದೆಂದು ಜಿಲ್ಲಾಡಳಿತಕ್ಕೆ ಕರುನಾಡ ವಿಜಯಸೇನೆಯ ಸಂಘಟನೆ ಜಿಲ್ಲಾಧ್ಯಕ್ಷ ಕೆ.ಟಿ.ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದುರ್ಗೋತ್ಸವ ಕಾರ್ಯಕ್ರಮ ನಡೆಸುವುದು ಜಿಲ್ಲೆಯ ಪ್ರತಿನಿಧಿಗಳಿಗೆ ಸ್ವಾಭಿಮಾನ ಪ್ರಶ್ನೆಯಾಗಿದೆ. ಆದರೆ ಈ ಬಗ್ಗೆ ಅಸಡ್ಡೆ ವರ್ತನೆ ತೋರಿಸುತ್ತಿದ್ದಾರೆ.

ನಿನ್ನೆ ಕಿತ್ತೂರು ಉತ್ಸವದ ರಥಯಾತ್ರೆ ಜಿಲ್ಲೆಗೆ ಆಗಮಿಸಿದಾಗ ಜಿಲ್ಲಾಡಳಿತ ಸ್ವಾಗತಿಸಿ ಬೀಳ್ಕೊಡುಗೆ ಮಾಡಿದ್ದು ಸಂತೋಷದ ವಿಷಯ. ಆದರೆ ಜಿಲ್ಲೆಯ ದುರ್ಗೋತ್ಸವವನ್ನೇ ಮರೆತಿದ್ದಾರೆ ಎಂದು ಆರೋಪಿಸಿದರು.



ಈ ಹಿಂದೆ ಹೆಚ್.ಆಂಜನೇಯರವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ದುರ್ಗೋತ್ಸವ ಕಾರ್ಯಕ್ರಮ ನಡೆದಿದ್ದು. ಅಲ್ಲಿಂದ ಇಲ್ಲಿಯವರೆಗೆ ನಡೆದೇ ಇಲ್ಲ. ನಾವು ಈ ಬಗ್ಗೆ ಹೋರಾಟ ಮಾಡಿ ಮನವಿ ಸಲ್ಲಿಸಿದರು. ಸಹ ಇಲ್ಲಿವರೆಗೂ ಯಾವುದೇ ಉತ್ತರ ಬಂದಿಲ್ಲ. ಕೋಟೆಯನ್ನಾಗಿಸಿದ ಮದಕರಿ ನಾಯಕರು ಹಿಂದುಳಿದ ಸಮುದಾಯದ ನಾಯಕನ ದೃಷ್ಟಿಯಿಂದ ನೀವು ದುರ್ಗೋತ್ಸವ ಮಾಡಲಿಕ್ಕೆ ಹಿಂಜರಿಯುತ್ತಿರಬಹುದು ಎಂದು ದೂರಿದರು.


ಪುಟ 2


## ಸಾಣೇಹಳ್ಳಿ ಶ್ರೀ ವಿರುದ್ಧ ಸುಳ್ಳು ಆರೋಪ: ಪ್ರಕರಣ ದಾಖಲು

» ಹೊಸದುರ್ಗ

ತಾಲ್ಲೂಕಿನ ತರಳಬಾಳು ಶಾಖಾಮಠದ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಸಂದೇಶಗಳನ್ನು ಬಿತ್ತರಿಸಿದವರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ಹೊಸದುರ್ಗ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತಾಲ್ಲೂಕಿನ ಸಾಣೇಹಳ್ಳಿಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯ ಬರ್ಬರ ಹತ್ಯೆ, ಗುಟ್ಟು ಬಿಡದ ಸ್ವಾಮೀಜಿ, ಪೋಲಿಸರು ಹಾಗೂ ಶಾಸಕ ಬಿ.ಜಿ. ಗೋವಿಂದಪ್ಪ. ಈ ಘಟನೆಯಲ್ಲಿ ಸ್ವಾಮೀಜಿ ಹಾಗೂ ಶಿಕ್ಷಕರ ಕೈವಾಡವಿದೆ. ಸೂಕ್ತ ತನಿಖೆಯಾಗಬೇಕು ತಪ್ಪಿದ್ದಲ್ಲಿ ಮಠಕ್ಕೆ ಬೀಗ ಹಾಕಲಾಗುವುದು '. ಈ ರೀತಿಯ ಸಂದೇಶಗಳು ಕಳೆದೆರಡು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಘಟನೆ ವಿವರ: ಆಕ್ಟೋಬರ್ 4 ರಂದು ಸಂಜೆ 4.30 ಕ್ಕೆ ತಾಲೂಕಿನ ಪಾಳೇದಹಳ್ಳಿ, ಶೆಟ್ಟಿಹಳ್ಳಿ ಗ್ರಾಮದ ನಡುವೆ ಯಳಗಮ್ಮ ದೇವಾಲಯದ ಸಮೀಪ ಸಾಣೇಹಳ್ಳಿ ಗುರುಪಾದೇಶ್ವರ ಪ್ರೌಢಶಾಲೆಯಲ್ಲಿ ಹತ್ತನೆ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದ, ವಿದ್ಯಾರ್ಥಿ ಪವನ್ ಬೈಕ್ ನಲ್ಲಿ ಬಿದ್ದು, ಸ್ಥಳದಲ್ಲಿಯೇ ಮೃತಪಟ್ಟಿದ್ದ ಈ ಕುರಿತು ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.


ಪುಟ 2


## ಪ್ರಮುಖ ಸುದ್ದಿ

# ಭ್ರಷ್ಟಾಚಾರ ಮರೆ ಮಾಚಲು ಜಾತಿ ಗಣತಿ ಅಸ್ತ್ರ: ರವಿ

» ಚಿತ್ರದುರ್ಗ

ರಾಜ್ಯ ಸರ್ಕಾರದ ಮೇಲೆ ಭ್ರಷ್ಟಾ ಸರ್ಕಾರ ಎಂಬ ಹಣೆಪಟ್ಟಿ ಇದ್ದು ಇದನ್ನು ಮರೆ ಮಾಚಲು ಜಾತಿ ಗಣತಿ ಅಸ್ತ್ರ ಪ್ರಯೋಗಿಸುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಮೀಸಲಾತಿ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಜವಾಹರಲಾಲ್ ನೆಹರು ಮೀಸಲಾತಿ ವಿರೋಧಿಸಿದ್ದರು. ಅದರ ಪತ್ರವನ್ನು ಮೋದಿಯವರು ಇತ್ತಿಚೆಗೆ ಬಿಡುಗಡೆ ಮಾಡಿದ್ದಾರೆ. ಎಸ್ಸಿ, ಎಸ್ಟಿ ಮೀಸಲಾತಿಯನ್ನು ಹೆಚ್ಚಿಸಿದ್ದು ಕಾಂಗ್ರೆಸ್ ಅಲ್ಲ , ಬಿಜೆಪಿ ಸರ್ಕಾರ ಎಂದು ಮರೆಯಬಾರದು. ಬಿಜೆಪಿಗೆ ಪ್ರಮಾಣಿಕ ಬದ್ಧತೆ ಇದೆ. ಹಿಂದುಳಿದ ವರ್ಗಕ್ಕೆ ಸಂವಿಧಾನ ಬದ್ಧತೆ ಕೊಟ್ಟಿದ್ದು ಬಿಜೆಪಿ ಸರ್ಕಾರವಿದೆ. ಸಿಎಂ ಸಿದ್ದರಾಮಯ್ಯ ಅವರ ಮೇಲೆ ನಮಗೆ ಅನುಮಾನವಿದೆ. ನಿಮ್ಮ ಸರ್ಕಾರ ಭ್ರಷ್ಟಾಚಾರ ಮುಚ್ಚಿ ಹಾಕಲು ಮೀಸಲಾತಿ ನಾಟಕ ಮಾಡುತ್ತಿದ್ದಾರೆ ಎಂದು ದೂರಿದರು.

ಹಿಂದುಳಿದ ವರ್ಗಗಳಿಗೆ ಸಹ ಒಳ ಮೀಸಲಾತಿ ನೀಡಬೇಕು ಎಂದು ಬಿಜೆಪಿ ಒತ್ತಾಯಿಸುತ್ತದೆ. ಎಸ್ಟಿ, ಎಸ್ಸಿ ರೀತಿಯಲ್ಲಿ ಹಿಂದುಳಿದ ವರ್ಗಕ್ಕೆ ಒಳಮೀಸಲಾತಿಯಿಂದ ಬಡವರಿಗೆ ಅನುಕೂಲವಾಗಲಿ. ಮುಸ್ಲಿಂ ಜಾತಿಯಲ್ಲಿ 48 ಜಾತಿಗಳಿವೆ. ಒಳಗಿನ ಜಾತಿಗಳಲ್ಲಿ ಬಡವರಿದ್ದು ಅವರಿಗೆ ಸಹ ಒಳ ಮೀಸಲಾತಿ ಜಾರಿಯಾಗಲಿ.ಆರ್ಥಿಕ, ಶೈಕ್ಷಣಿಕ ಮೀಸಲಾತಿ ಜಾರಿಯಾಗಲಿ.ಹಿಂದೂಗಳಲ್ಲಿ ಒಡಕು ಮೂಡಿಸುವ ಕೆಲಸ ಮಾಡಿದರೆ ಬಿಜೆಪಿ ಎಂದು ಕ್ಷಮಿಸುವುದಿಲ್ಲ. ವಾಲ್ಮೀಕಿ ಹಗರಣದಲ್ಲಿ ಇಡಿ ದಾಖಲೆ ಹೊರ ತಂದಿದ್ದು ಮಾಜಿ ಸಚಿವ ನಾಗೇಂದ್ರ ಅಪ್ತ ವಿಜಯಕುಮಾರ್ ಮೊಬೈಲ್‌ನಲ್ಲಿ ಇರುವ ದಾಖಲೆ ಮೂಲಕ ಬಯಲಾಗಿದೆ. ಎಸ್‌ಐಟಿ ಕೇಸ್‌ನಲ್ಲಿ ನಾಗೇಂದ್ರ ಮತ್ತು ಬಸವನಗೌಡ ದದ್ದಲ್ ಹೆಸರು ದಾಖಲು ಮಾಡಿಲ್ಲ. ಮಹರ್ಷಿ ವಾಲ್ಮೀಕಿ ಹಗರಣದ ತನಿಖೆ ಮಾಡಿದ ತಂಡವನ್ನು ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.



ಮುಖ್ಯಮಂತ್ರಿಸಿದ್ದರಾಮಯ್ಯರಕ್ಷಣೆಗಾಗಿ ಒಡೆದಾಡುತ್ತಿದ್ದಾರೆ. ಮೊದಲಿನ ಧಮ್ಮು ಹಮ್ಮುನ್ನು ಸಿಎಂ ಕಳೆದುಕೊಂಡಿದ್ದಾರೆ. ಕಾಂಗ್ರೆಸ್ ವಲಯದಲ್ಲಿ ಬ್ರೇಕ್ ಫಾಸ್ಟ್, ಲಂಚ್ ಮಿಟಿಂಗ್, ಡಿನ್ನರ್ ಪಾರ್ಟಿಗಳು ನಡೆಯುತ್ತಿರುವುದು ಸಿಎಂ ಬದಲಾವಣೆ ಭಾಗಗಳೇ ಆಗಿದೆ. ಸಿದ್ದರಾಮಯ್ಯ ಅವರನ್ನು ಯಾರು ಟೀಕೆ ಮಾಡಬಾರದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಸರಿಯಾದ ವ್ಯವಸ್ಥೆ ಅಲ್ಲ.ಹರಿಯಾಣದಲ್ಲಿ ಬಿಜೆಪಿ ಗೆದ್ದಿರುವುದು ಇವಿಎಂ ಸರಿ ಇಲ್ಲ ಎನ್ನುತ್ತರಾರೆ, ಆದರೆ ಕಾಂಗ್ರೆಸ್ ಗೆದ್ದರೆ ಮಾತ್ರ ಇವಿಎಂ ಸರಿ ಇದೆ ಎಂಬ ಸಂವಿಧಾನ ವಿರೋಧಿ ನಡವಳಿಕೆ ತೋರಿಸುತ್ತಿದೆ ಎಂದು ರವಿ ತಿಳಿಸಿದರು.

ದಾವಣಗೆರೆ, ಬೆಂಗಳೂರು ನಲ್ಲಿ ಪಾಕಿಸ್ತಾನ ಪ್ರಜೆಗಳು ಪತ್ತೆಯಾಗಿರುವುದು ಆತಂಕದ ಸಂಗತಿಯಾಗಿದೆ. ಭಾರತದ ಆರ್ಥಿಕತೆ ದುರ್ಬಲಗೊಳಿಸಲು ನಕಲಿ ನೋಟು, ಡ್ರಕ್ಸ್ ದಂಧೆ ಪ್ರಕರಣಗಳು ಹೆಚ್ಚುತ್ತಿದೆ. ಕೈಗಾರಿಕೆ ಮತ್ತು ಕಾಫಿ ತೋಟಗಳ ಕೆಲಸಕ್ಕೆ ಬರುತ್ತಿರುವುದು ದೇಶದ ಹಿತ ದೃಷ್ಟಿಯಿಂದ ಅಪಾಯಕಾರಿ ಎಂದರು. ದೇಶದಾದ್ಯಂತ ಎನ್‌ಆರ್ಸಿನ್ನು ದೇಶದಲ್ಲಿ ನಡೆಯಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ ವಕ್ಫ್ ವಿಚಾರಕ್ಕೆ ಸಂಬಂಧಿಸಿದಂತೆ ಜಮೀರ್ ಅಹ್ಮದ್ ಅವರು ವಕ್ಫ್ ಆಸ್ತಿ ಯತ್ನಳ್ ಅಪ್ಪನ ಆಸ್ತಿ ಅಲ್ಲ ಎಂದು ಹೇಳಿದ್ದಕ್ಕೆ ಉತ್ತರಿಸಿ ಎಲ್ಲಾವೂ ಸಹ ಸರ್ಕಾರದ ಆಸ್ತಿ ಮತ್ತು ನಮ್ಮ ಪುರಾತನ ಆಸ್ತಿ ಎಂದರು.

ರತನ್ ಟಾಟಾ ಸಾವು ದೇಶಕ್ಕೆನಷ್ಟವಾಗಿದೆ. ರತನ್ ಟಾಟಾ ಅವರನ್ನು ಉದ್ಯಮಿ ಸಂತ ಎಂದು ಅವರನ್ನು ಕರೆಯಬಹುದು. ಅವರ ನಮ್ಮನ್ನೆಲ್ಲ ಅಗಲಿರುವುದು ನಮಗೆ ತುಂಬಲಾರದ ನಷ್ಟವಾಗಿದೆ ಎಂದು ಸಿ.ಟಿ.ರವಿಸಂತಾಪವನ್ನು ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಮಾಜಿ ಜಿಲ್ಲಾ ಪಂಚಾಯತ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಂಪತ್, ರೈತ ಮೋರ್ಚಾ ಕಾರ್ಯದರ್ಶಿ ಮಲ್ಲಿಕಾರ್ಜುನ್, ಶ್ರೀಮತಿ ಭಾರ್ಗವಿ ದ್ರಾವಿಡ್ ಮಾಧ್ಯಮ ವಕ್ತಾರ ನಾಗರಾಜ್ ಬೇದ್ರೆ ಇದ್ದರು.

## ಫಾಸ್ಟ್ ನ್ಯೂಸ್

### ದುರ್ಗೋತ್ಸವ: ವರ್ಷಾಂತ್ಯದೊಳಗೆ ಆಚರಿಸಿ

» ಮೊದಲ ಪುಟದಿಂದ

ಕರ್ನಾಟಕ ಸರ್ಕಾರದಿಂದ ಮೈಸೂರು ದಸರಾ, ಹಂಪಿ ಉತ್ಸವ, ಕೊಡಗು ಉತ್ಸವ, ಕಿತ್ತೂರು ಉತ್ಸವ ಈ ರೀತಿ ಕೆಲವು ಜಿಲ್ಲೆಗಳಲ್ಲಿ ಇತಿಹಾಸವುಳ್ಳ ಹೆಸರುಗಳ ಮೇಲೆ ಉತ್ಸವಗಳನ್ನು ಆಚರಿಸುತ್ತಾ ಬಂದಿರುತ್ತದೆ. ಆದರೆ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿನ ದುರ್ಗೋತ್ಸವವನ್ನು ಆಚರಣೆ ಮಾಡಲು ಮಾತ್ರ ಯಾವ ಚುನಾಯಿತ ಪ್ರತಿನಿಧಿಯೂ ಸಹಾ ಮುಂದೆ ಬಾರದಿರುವುದು ನಮ್ಮ ಜಿಲ್ಲೆಯ ದುರಂತವಾಗಿದೆ. ಈ ಹಿನ್ನಲೆಯಲ್ಲಿ ಜಿಲ್ಲೆಗೆ ಯಾವುದೇ ರೀತಿಯಲ್ಲಿ ಅಪಮಾನ.. ಅವಮಾನ ಆಗುವುದಕ್ಕೆ ನಾವು ಬಿಡುವುದಿಲ್ಲ ಎಂದು ಶಿವಕುಮಾರ್ ತಿಳಿಸಿದರು.

ಮಹಿಳಾ ಘಟಕದ ಅಧ್ಯಕ್ಷರಾದ ವೀಣಾ ಗೌರಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ನಿಸಾರ್, ಅವಿನಾಶ್, ಮುಜಾವಿಲ್ಲಾ ಭಾಗವಹಿಸಿದ್ದರು.

### 11ಕ್ಕೆ ಮಡಿಕಟ್ಟೆಯಲ್ಲಿ ಶ್ರೀಬನ್ನಿಮಹಾಂಕಾಳಿ ದೇವಿಯ ಪೂಜಾ ಮಹೋತ್ಸವ

» ದಾವಣಗೆರೆ

ದಾವಣಗೆರೆ ಧೋಬಿ ಘಾಟ್ (ಮಡಿಕಟ್ಟೆ) ವೃತ್ತಿಪರ ಮಡಿವಾಳರ ಸಂಘ, ಜಿಲ್ಲಾ ಪಂಚಾಯತ್ ಎದುರು, ಎನ್.ಹೆಚ್.-4, ದಾವಣಗೆರೆ. ದಾವಣಗೆರೆ ಜಿಲ್ಲಾ ಶ್ರೀ ಮಡಿವಾಳರ ಮಾಚಿದೇವ ಸಂಘ, ದಾವಣಗರ ಜಿಲ್ಲಾ ಮಹಿಳಾ ಮಡಿವಾಳರ ಮಾಚಿದೇವ ಸಂಘ 1ನೇ ಮುಖ್ಯ ರಸ್ತೆ, 17ನೇ ತಿರುವು, ವಿನೋಬನಗರ, ದಾವಣಗೆರೆ ಇವರ ಆಶ್ರಯದಲ್ಲಿ ಅಕ್ಟೋಬರ್ 11ರಂದು 15ನೇ ವರ್ಷದ ಶ್ರೀ ಬನ್ನಿಮಹಾಂಕಾಳಿದೇವಿಯ ಪೂಜಾ ಮಹೋತ್ಸವ ಆಯೋಜಿಸಲಾಗಿದೆ. ಸೆ.11ನೇ ಶುಕ್ರವಾರ ಬೆಳಿಗ್ಗೆ 6ರಿಂದ ರುದ್ರಹೋಮ, ಶ್ರೀದೇವಿಗೆ ವಿಶೇಷ ಆಲಂಕಾರ, ಅಭಿಷೇಕ, ಪೂಜಾ ಕಾರ್ಯಕ್ರಮ, ನಂತರ ಶ್ರೀಗಳಿಂದ ಆರ್ಶಿವಚನ, ಗಣ್ಯರಿಂದ ದಸರಾ ಸಂದೇಶ, 12.30ಕ್ಕೆ ಅನ್ನ ಸಂತರ್ಪಣೆ, ನಂತರ ಮಧ್ಯಾಹ್ನ 1-30 ರಿಂದ ಮಕ್ಕಳಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಅಧ್ಯಕ್ಷತೆಯನ್ನು ಚಿತ್ರದುರ್ಗದ ಮಾಚಿದೇವ ಮಹಾಸಂಸ್ಥಾನ ಮಠದ ಬಸವಮಾಚೀದೇವ ಮಹಾಸ್ವಾಮಿಗಳು ವಹಿಸಲಿದ್ದು, ಭೂ ವಿಜ್ಞಾನ ಮತ್ತು ಗಣಿ, ತೋಟಗಾರಿಕೆ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟನೆ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಡಾ.ಶಾಮನೂರು ಶಿವಶಂಕರಪ್ಪ, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಂಸದರಾದ ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ಪಾಲಿಕೆ ಸದಸ್ಯೆ ಗೀತಾ ನಾಗರಾಜ್, ದಾವಣಗೆರೆ ಜಿಲ್ಲಾ ಶ್ರೀ ಮಡಿವಾಳ ಮಾಚಿದೇವ ಸಂಘದ ಜಿಲ್ಲಾಧ್ಯಕ್ಷರಾದ ಎಂ.ನಾಗೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಕಾರ್ಯಾಧ್ಯಕ್ಷ ಆವರಗೆರೆ ಹೆಚ್.ಜಿ.ಉಮೇಶ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ನಾಗರಾಜ್, ಮಹಿಳಾ ಸಂಘದ ಅಧ್ಯಕ್ಷೆ ನಾಗಮ್ಮ, ಧೋಬಿಘಾಟ್ ಸಂಘದ ಅಧ್ಯಕ್ಷ ಕಿಶೋರ್ ಕುಮಾರ್, ಸಮಾಜದ ಹಿರಿಯರಾದ ಮಲ್ಲೇಶಪ್ಪ, ಶಿವಮೂರ್ತಪ್ಪ, ಕೃಷ್ಣಪ್ಪ ಆಗಮಿಸಲಿದ್ದಾರೆ.

### ಸಾಣೇಹಳ್ಳಿ ಶ್ರೀ ವಿರುದ್ಧ ಸುಳ್ಳು ಆರೋಪ: ದೂರು

» ಮೊದಲ ಪುಟದಿಂದ

ಈ ವಿಚಾರವಾಗಿ ಕೆಲವರು ಮಠಕ್ಕೆ ಹಾಗೂ ಸಮಾಜದ ಬಗ್ಗೆ ವ್ಯರ್ಥ ಆರೋಪ ಮಾಡುತ್ತಿದ್ದಾರೆ. ಸುಳ್ಳು ಸುದ್ದಿ ಪ್ರಚಾರ ಮಾಡಿ, ಸಮುದಾಯದ ನಡುವೆ ದ್ವೇಷ ಮೂಡುವಂತೆ ಮಾಡುತ್ತಿದ್ದಾರೆ. ಅವಹೇಳನಕಾರಿ ಸಂದೇಶಗಳನ್ನು ಪ್ರಚಾರ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಹೊಸದುರ್ಗ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು ಈ ಬಗ್ಗೆ ಪೋಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

### ಅ.17 ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

» ಚಿತ್ರದುರ್ಗ

ಚಿತ್ರದುರ್ಗ ಜಿಲ್ಲಾ ಕೇಂದ್ರದಲ್ಲಿ ಇದೇ ಅ.17 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಚಿತ್ರದುರ್ಗ ನಗರದ ಐತಿಹಾಸಿಕ ಕೋಟೆ



ಮುಂಭಾಗದಿಂದ ಮದಕರಿ ನಾಯಕ ವೃತ್ತದವರೆಗೂ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 12ಕ್ಕೆ ನಗರದ ತ.ರಾ.ಸು ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಮೆರವಣಿಗೆ ಮತ್ತು ವೇದಿಕೆ ಕಾರ್ಯಕ್ರಮಕ್ಕೆ ಸಾರ್ವಜನಿಕರು ಪಾಲ್ಗೊಳ್ಳುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಬೆಲೆ ಏರಿಕೆ ನಡುವೆಯೂ ವಿಜಯದಶಮಿಗೆ ವೈಭವದ ಸಿದ್ಧತೆ: ಜನರಲ್ಲಿ ಕುಂದದ ಉತ್ಸಾಹ

» ಚಳ್ಳಕೆರೆ

ಬೆಲೆ ಏರಿಕೆ ನಡುವೆಯೂ ನಾಡಹಬ್ಬ ದಸರಾಗೆ ವ್ಯಾಪಾರ, ವಹಿವಾಟು ಭರದಿಂದ ಸಾಗಿತು. ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬಕ್ಕಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಬಂದಿದ್ದ ಬಾಳೆಎಲೆ, ಬೂದುಗುಂಬಳ, ಹೊಸಬಟ್ಟೆ ಖರೀದಿ ಭರಾಟೆ ಜೋರಾಗಿ ನಡೆಯುತ್ತಿದೆ.





ನಗರದ ಪಾವಗಡ, ಚಿತ್ರದುರ್ಗ, ಬೆಂಗಳೂರು ರಸ್ತೆಗಳಲ್ಲಿ ಬಾಳೆಕಂದು, ಹೂವು, ಬೂದುಗುಂಬಳ ಕಾಯಿ ವ್ಯಾಪಾರ ಸೇರಿದಂತೆ ಬಟ್ಟೆ ಅಂಗಡಿ ಹಾಗೂ ದಿನಸಿ ಅಂಗಡಿಗಳಲ್ಲಿ ಖರೀದಿಸಲು ಜನರು ಮುಗಿಬಿದಿದ್ದು ಕಂಡುಬಂತು.

ಆಯುಧ ಪೂಜೆಯ ದಿನದಂದು ವಾಹನಗಳು, ಸಣ್ಣಪ್ಯಾಕ್ಟರಿ, ವಾಹನ ಶೋರೂಂಗಳು, ಗ್ಯಾರೇಜ್ ಅಂಗಡಿಗಳು, ಮನೆಗಳಲ್ಲಿ ಸೇರಿದಂತೆ ಮತ್ತಿತರರ ಕಡೆಗಳಲ್ಲಿ ಪೂಜಾ ಕಾರ್ಯಕ್ಕಾಗಿ ಬೆಲೆ ಏರಿಕೆಯ ನಡುವೆಯೂ ಹೂ, ಹಣ್ಣ, ಬಾಳೆಕಂದು ಖರೀದಿಸಿದರು.

ವಿವಿಧ ತಾಲ್ಲೂಕುಗಳಿಂದಲ್ಲೂ ವ್ಯಾಪಾರಸ್ಥರು ಬಾಳೆಕಂದು, ಬೂದುಗುಂಬಳ ಕಾಯಿ, ಹೂವು ಸಾಕಷ್ಟು ಪ್ರಮಾಣದಲ್ಲಿ ಚಳ್ಳಕೆರೆ ಮಾರುಕಟ್ಟೆಗೆ ಬಂದಿದ್ದು ಕಂಡುಬಂತು.

ಮಳೆಯಿಂದಾಗಿ ಮಾರಾಟಗಾರರಿಗೆ ಸೂಕ್ತ ವ್ಯವಸ್ಥೆಯಿಲ್ಲದ ಕಾರಣ ವ್ಯಾಪಾರಸ್ಥರು ಪರದಾಡಿದರು. ಮಳೆಯಿಂದ ತಮ್ಮ ವಸ್ತುಗಳನ್ನು ರಕ್ಷಿಸಿಕೊಳ್ಳಲು ಹರಸಾಹಸಪಟ್ಟರು. ಜಿಲ್ಲೆಯಲ್ಲಿ ದಸರಾ ಹಬ್ಬಕ್ಕೆ ಒಂದು ಕೆ.ಜಿ ಬೂದುಗುಂಬಳ 35 ರೂ.ನಿಂದ 60, 70 ರೂ.ವರೆಗೆ,ಮಾರಾಟಗಾರರು ಹೇಳುತ್ತಿದ್ದರೆ ಗ್ರಾಹಕರು ಕೇಳಿ ದಂಗಾದರು.

ಶುಕ್ರವಾರದ ಆಯುಧ ಪೂಜೆ ಹಿನ್ನೆಲೆಯಲ್ಲಿ ಒಂದು ಮಾರು ಸೇವಂತಿಗೆ ಹೂವು 80-100, 120 ರೂ., ಮಲ್ಲಿಗೆ ಹೂವು 100- 120 ರೂ., ಕನಕಾಂಬರ 100- 120 ರೂ., ಚೆಂಡು ಹೂವು 100 ರೂ. ಒಂದು ಮಾರಿಗೆ ಮಾರಾಟ ಮಾಡುತ್ತಿದ್ದಾರೆ. ಒಂದು ಸುಗಂಧರಾಜ ಹೂವಿನ ಹಾರ 100, 150, 200, 500 ರೂ. ವರೆಗೆ ಮಾರಾಟ ನಡೆಯಿತು. ಒಂದು ಕೆಜಿ ಬಾಳೆ ಹಣ್ಣಿಗೆ 50- 80 ರೂ.ವರೆಗೆ ಇದ್ದರೆ, ಪಚ್ಚಬಾಳೆ 50 ರೂ. ಇದೆ. ವಿವಿಧ ಹಣ್ಣುಗಳು ವ್ಯಾಪಾರ ವಹಿವಾಟು ಭಾರಿ ಜೋರಾಗಿಯೇ ನಡೆಯಿತು. ಒಟ್ಟಾರೆ ನಾಡಹಬ್ಬ ದಸರಾ, ವಿಜಯದಶಮಿ ಹಬ್ಬಕ್ಕೆ ಜನರು ಸಕಲಸಿದ್ದತೆಯನ್ನು ನಡೆಸಿದ್ದಾರೆ.

## ಕನಕ ಜಯಂತಿ 7ನೇ ವರ್ಷದ ಲಕ್ಷದೀಪೋತ್ಸವ

» ಹೊಸದುರ್ಗ

ಕನಕ ಜಯಂತ್ಯುತ್ಸವದ ಪ್ರಯುಕ್ತ 7ನೇ ವರ್ಷದ ಲಕ್ಷದೀಪೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನ.16 ರಿಂದ 18ರವರೆಗೆ 3 ದಿನಗಳ ಕಾಲ ಹೊಸದುರ್ಗ ತಾಲೂಕಿನ ಕೆಲ್ಲೋಡು ಕನಕ ಗುರುಪೀಠದ ಕನಕಧಾಮದಲ್ಲಿ ಏರ್ಪಡಿಸಲಾಗಿದೆ ಎಂದು ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ತಿಳಿಸಿದರು.



ತಾಲೂಕಿನ ಬಾಗೂರಿನ ಶ್ರೀ ರೇವಣಸಿದ್ದೇಶ್ವರ ಬೀರಲಿಂಗೇಶ್ವರ ದೇವಾಲಯದಲ್ಲಿ ಕನಕ ಗುರುಪೀಠ ಏರ್ಪಡಿಸಿರುವ ಕನಕ ಜಯಂತ್ಯುತ್ಸವ ಲಕ್ಷದೀಪೋತ್ಸವ ಕಾರ್ಯಕ್ರಮದ ಪ್ರಚಾರ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಸ್ವಾಮೀಜಿ ಮಾತನಾಡಿ, ಕನಕದಾಸರ ತತ್ವಾದರ್ಶಗಳನ್ನು ಲಕ್ಷದೀಪೋತ್ಸವ ಆಚರಿಸುವ ಮೂಲಕ ಭಕ್ತರಲ್ಲಿ ಜಾಗೃತಿ ಮೂಡಿಸುವ ಉದ್ದೇಶವಾಗಿದೆ. ಕನಕ ಜಯಂತ್ಯುತ್ಸವ ಅಂಗವಾಗಿ ಕೆಲ್ಲೋಡು ಕನಕ ಗುರುಪೀಠದಲ್ಲಿ ನ.16ರಂದು ರಾಜ್ಯ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಕನಕ ಕಪ್ ಏರ್ಪಡಿಸಲಾಗಿದೆ. ನ.17ರಂದು ರಾಜ್ಯ ಮಟ್ಟದ ಭಾರಿ ಟಗರಿನ ಕಾಳಗ, ನ.18ರಂದು ಬೆಳಿಗ್ಗೆಯಿಂದ ಕೃಷಿಮೇಳ, ಸಂಜೆ ವಿವಿಧ ಮಠಾಧೀಶರ ಜನಪ್ರತಿನಿಧಿಗಳ, ಸಮಾಜದ ಮುಖಂಡರ ಸಮ್ಮುಖದಲ್ಲಿ ಲಕ್ಷದೀಪೋತ್ಸವ ಜರುಗಲಿದೆ. ತಾಲೂಕಿನ ಎಲ್ಲ ಬೀರಲಿಂಗೇಶ್ವರ ದೇವರುಗಳ ಸಾನ್ನಿಧ್ಯದಲ್ಲಿ ಕನಕ ಗುರುಪೀಠದ ನೂತನ ಮಠದ ಕಟ್ಟಡ ಲೋಕಾರ್ಪಣೆ ಕಾರ್ಯಕ್ರಮ ಯೋಜಿಸಲಾಗಿದೆ ಎಂದು ತಿಳಿಸಿದರು.ಮನೆ ಮನೆಗಳಲ್ಲಿ ಕನಕ ಹಬ್ಬ; ನವಂಬರ್ 18ರ ಕನಕ ಜಯಂತ್ಯುತ್ಸವ ಅಂಗವಾಗಿ ಪ್ರತಿಗ್ರಾಮದ ಮನೆ ಮನೆಯಲ್ಲೂ ಕನಕದಾಸರ ಜಯಂತಿಯನ್ನು ಹಬ್ಬದ ರೀತಿಯಲ್ಲಿ ಕಲಾಮೇಳಗಳೊಂದಿಗೆ ಕನಕದಾಸರ ಕೀರ್ತನೆಗಳನ್ನು ಭಜಿಸುವ ಮೂಲಕ ಕನಕದಾಸರ ಆದರ್ಶಗಳನ್ನು ಇಂದಿನ ಯುವ ಪೀಳಿಗೆಯ ಪಾಲಿಸುವಂತಾಗಬೇಕು. ಬೆಂಗಳೂರು ವಿಭಾಗದ ಸಾಧ್ಯವಾದಷ್ಟು ಎಲ್ಲ ಗ್ರಾಮಗಳಿಗೆ ಭೇಟಿ ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು ಎಂದು ಹೇಳಿದರು.ಈ ಸಂದರ್ಭದಲ್ಲಿ ಮುಖಂಡರಾದ ಬಿ.ಜಿ.ಅರುಣ್ ಗೋವಿಂದಪ್ಪ, ಎಂ.ಆರ್.ಸಿ ಮೂರ್ತಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಾರದಮ್ಮ ನೀಲಕಂಠಪ್ಪ, ರೇವಣಸಿದ್ದೇಶ್ವರ ಸಂಸ್ಥಾನದ ಗುಡಿ ಗೌಡ್ರು ಮುದ್ದಪ್ಪ, ಗುತ್ತಿಗೆದಾರ ರಮೇಶ್, ಬೀರೇಶ ಹಾಜರಿದ್ದರು.

## ಕರವೇ (ಪ್ರವೀಣ್‌ಶೆಟ್ಟಿ)ಬಣದಿಂದ ರೇಹಾನ್‌ಪಾಷರವರಿಗೆ ಸನ್ಮಾನ



» ಚಳ್ಳಕೆರೆ

ತಾಲ್ಲೂಕಿನ ತಹಶೀಲ್ದಾರಾಗಿ ಕಾರ್ಯನಿರ್ವಹಿಸುತ್ತಿರುವ ರೇಹಾನ್‌ಪಾಷರವರಿಗೆ ಕಂದಾಯ ಇಲಾಖೆವತಿಯಿಂದ ರಾಜ್ಯಮಟ್ಟದ ಉತ್ತಮ ಕಂದಾಯಾಧಿಕಾರಿ ಎಂದು ಕಂದಾಯಸಚಿವ ಕೃಷ್ಣಬೈರೇಗೌಡ ಇತ್ತೀಚೆಗೆ ಪ್ರಶಸ್ತಿ ನೀಡಿ ಸನ್ಮಾನಿಸಿರುತ್ತಾರೆ. ರಾಜ್ಯಮಟ್ಟದಲ್ಲಿ ಪ್ರಶಸ್ತಿಪಡೆದ ತಹಶೀಲ್ದಾರ್ ರೇಹಾನ್‌ಪಾಷರವರಿಗೆ ಕರ್ನಾಟಕ ರಕ್ಷಣಾವೇದಿಕೆ (ಪ್ರವೀಣ್‌ಶೆಟ್ಟಿಬಣ) ತಾಲ್ಲೂಕು ಘಟಕ ಅವರ ಕಚೇರಿಗೆ ತೆರಳಿ ಸನ್ಮಾನಿಸಿ, ಅಭಿನಂದಿಸಿತು. ಘಟಕದ ಅಧ್ಯಕ್ಷ ಪಿ.ಮಂಜುನಾಥ ಗೌರವಾಧ್ಯಕ್ಷ ಬೋಜರಾಜು ಮಾತನಾ ಡಿ, ತಾಲ್ಲೂಕಿನಲ್ಲಿ ಸುಮಾರು 50ಕ್ಕೂ ಹೆಚ್ಚು ತಹಶೀಲ್ದಾರರು ಕಾರ್ಯನಿರ್ವಹಿಸಿದ್ದಾರೆ. ಆದರೆ, ಕೇವಲ ಒಂದೇ ವರ್ಷದ ಅವಧಿಯಲ್ಲಿ ರೇಹಾನ್‌ಪಾಷರವರು ಉತ್ತಮ ಆಡಳಿತಾಧಿಕಾರಿ ಪ್ರಶಸ್ತಿ ಪಡೆದಿರುವುದು ತಾಲ್ಲೂಕಿಗೆ ಹೆಮ್ಮೆಯ ವಿಷಯವಾಗಿದೆ. ರೇಹಾನ್‌ಪಾಷರವರು ತಮ್ಮ ಸೇವೆಯನ್ನು ಹೀಗೆ ಮುಂದುವರೆಸಲಿ ಎಂದು ಶುಭಹಾರೈಸುವುದಾಗಿ ತಿಳಿಸಿದರು. ತಾಲ್ಲೂಕು ಅಧ್ಯಕ್ಷ ಪಿ.ಮಂಜುನಾಥ, ಪ್ರಧಾನ ಕಾರ್ಯದರ್ಶಿ ಚಂದ್ರಣ್ಣ, ನಾಯಕನಹಟ್ಟಿ ಅಧ್ಯಕ್ಷ ಸುರೇಶ್, ಯುವಘಟಕದ ಅಧ್ಯಕ್ಷ ರವಿ, ಉಪಾಧ್ಯಕ್ಷ ಬಾಲು, ಮನೋಹರ, ನನ್ನಿವಾಳಮಧು, ಮುಂತಾದವರು ಉಪಸ್ಥಿತರಿದ್ದರು. (ಪ್ರವೀಣ್‌ಶೆಟ್ಟಿಬಣ) ತಾಲ್ಲೂಕು ಘಟಕ ಸನ್ಮಾನಿಸಿದರು.

## ಒಂಟಿ ಮನೆ ದರೋಡೆ ಮಾಡಿದ ಕಳ್ಳರ ಬಂಧನ

» ಚಳ್ಳಕೆರೆ

ಕಳೆ ಜುಲೈ ತಿಂಗಳ 9 ರಂದು ತಾಲೂಕಿನ ಹಿರೇಹಳ್ಳಿ ಗ್ರಾಮದ ಹೊರವಲಯದಲ್ಲಿ ಒಂಟಿ ಮನೆಯ ಬಾಗಿಲು ಮುರಿದು ಒಳಗೆ ನುಗ್ಗಿದ ಕಳ್ಳರು ಮನೆಯ ಯಜಮಾನಿಗೆ ಚಾಕುವಿನಿಂದ ಎದುರಿಸಿ ಹಗ್ಗದ ಸಹಾಯದಿಂದ ಕೈಗಳನ್ನ ಕಟ್ಟಿ ಮನೆಯಲ್ಲಿದ್ದ 6,52,500 ನಗದು ಹಣ ಮತ್ತು ಚಿನ್ನ ಆಭರಣಗಳನ್ನ ದೋಚಿ ಪರಾರಿಯಾಗಿದ್ದ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಸ್ಪಿ ರಂಜಿತ್ ಕುಮಾರ್ ಬಂಡಾರೂ,ಡಿವೈಎಸ್ಪಿಟಿ.ಬಿ.ರಾಜಣ್ಣ ನೇತೃತ್ವದಲ್ಲಿ ತಳಕು ಪೊಲೀಸ್ ಠಾಣಾ ಪಿಎ[illegible] ಲೋಕೇಶ್ ಹಾಗೂ ಶಿವಕುಮಾರ್, ಸಿಬ್ಬಂದಿಗಳ ಸಹಕಾರದಲ್ಲಿ ಒಂಟಿ ಮನೆ ದರೋಡೆ ಮಾಡಿ ತಲೆ ತಪ್ಪಿಸಿಕೊಂಡಿದ್ದ ದರೋಡೆಕೋರರಾದ ಆಂಧ್ರಪ್ರದೇಶ ಅನಂತಪುರ ಜಿಲ್ಲೆಯ ರುದ್ರಂಪೇಟೆ ಎನ್ ಜಿ ಓ ಕಾಲೋನಿಯ ನೀಲಂ ಶ್ರೀರಾಮ್ ವಿಜಯ್, ವಿಜಯವಾಡದ ರಂಗುಲ ಪ್ರಸಾದ್. ಇಬ್ಬರನ್ನ ಪೊಲೀಸರು ಪತ್ತೆ ಮಾಡಿ ವಶಕ್ಕೆ ಪಡೆದಿದ್ದು ದರೋಡೆಯಲ್ಲಿ ನಾಯಕತ್ವ ವಹಿಸಿದ ಪಾಲವೆಂಕಟೇಶರಾವ್ ತಲೆ ತಪ್ಪಿಸಿಕೊಂಡಿದ್ದಾನೆ.ಇಬ್ಬರನ್ನೂ ವಶಕ್ಕೆ ಪಡೆದ ಪೊಲೀಸರು ಅವರಿಂದ ಕೃತ್ಯಕ್ಕೆ ಬಳಸಿದ್ದ ಸಿಸಿ ಕ್ಯಾಮೆರಾ, ಮಂಕಿಕ್ಯಾಪ್, ಚಾಕುಗಳು, ಟಾರ್ಚ್‌ಗಳು, ಕಟರ್ ಮೊಲ ಹಿಡಿಯುವ ಬಲೆ ,ಪ್ಲಾಸ್ಟಿಕ್ ಹಾಗೂ ಮೊಬೈಲ್ ಇವುಗಳನ್ನ ವಶಕ ಪಡೆದಿದ್ದು ನ್ಯಾಯಾಲಯದ ಮುಂದೆ ಈ ಇಬ್ಬರನ್ನ ಹಾಜರಿ ಪಡಿಸಲಾಗಿದೆ.

## ಶಿವಮೊಗ್ಗ ನವಿಲೆಯಲ್ಲಿ ಕೃಷಿ, ತೋಟಗಾರಿಕೆ ಮೇಳ

» ದಾವಣಗೆರೆ

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕೃಷಿ ಹಾಗೂ ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಅಕ್ಟೋಬರ್ 18 ರಿಂದ 21 ರವರೆಗೆ ನವಿಲೆಯಲ್ಲಿನ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕೃಷಿ ಮತ್ತು ತೋಟಗಾರಿಕೆ ಮೇಳ ಆಯೋಜಿಸಲಾಗಿದೆ. ಕೃಷಿ-ತೋಟಗಾರಿಕೆ ಮೇಳವನ್ನು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡುವರು. ಈ ಮೇಳದಲ್ಲಿ ನೂತನ ಕೃಷಿ ಪದ್ಧತಿ, ವಿವಿಧ ತಳಿಗಳ ಪರಿಚಯ, ಕೃಷಿಯಲ್ಲಿ ಆಧುನಿಕತೆ ಸೇರಿದಂತೆ ವಸ್ತುಪ್ರದರ್ಶನ ಮತ್ತು ಮಾಹಿತಿಯನ್ನು ನೀಡಲಾಗುತ್ತದೆ.

## ಪ್ರಮುಖ ಸುದ್ದಿ

# ಹಿರಿಯ ಕೈಗಾರಿಕೋದ್ಯಮಿ ರತನ್‌ಟಾಟಾರವರಿಗೆ ತಾಲ್ಲೂಕು ಛಾಯಾಗ್ರಾಹಕರ ಸಂಘದ ಶ್ರದ್ಧಾಂಜಲಿ

» ಚಳ್ಳಕೆರೆ

ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಮನ್ನಣೆ ಪಡೆದಿದ್ದ ಟಾಟಾ ಗ್ರೂಪ್‌ನ ಮಾಲೀಕ ರತನ್‌ಟಾಟಾ(86) ನಿಧನರಾಗಿದ್ದು, ನಗರದ ತಾಲ್ಲೂಕು ಛಾಯಾಗ್ರಾಹಕರ ಸಂಘ ರತನ್‌ಟಾಟಾರವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.



ಇಲ್ಲಿನ ಅಂಬೇಡ್ಕರ್ ರತನ್‌ಟಾಟಾರವರ ಭಾವಚಿತ್ರದ ಮೆರವಣಿಗೆ ನಂತರ ಶ್ರದ್ಧಾಂಜಲಿ ಸಭೆ ನಡೆಸಿ ರಾಷ್ಟ್ರದಲ್ಲಿ ಮೊದಲಬಾರಿಗೆ ಟಾಟಾ ಗ್ರೂಪ್ಸ್‌ಆಫ್ ಇಂಡಸ್ಟ್ರೀಸ್‌ನನ್ನು ಆರಂಭಿಸಿ ಲಕ್ಷಾಂತರ ಜನರ ಕಾರ್ಮಿಕರ ಬದುಕಿಗೆ ಆಸರೆಯಾದ ರತನ್‌ಟಾಟಾರವರ ಸೇವೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಅವರ ಸಾಧನೆ ಅಪ್ರತಿಮವಾದದ್ದು, ದೇಶದ ಉದ್ದಗಲದಲ್ಲಿ ರತನ್‌ಟಾಟಾರವರು ಟಾಟಾಗ್ರೂಫ್‌ನ ಕೈಗಾರಿಕೆ ಆರಂಭಿಸಿದರು. ಕೇವಲ ಶ್ರೀಮಂತ ವರ್ಗಕ್ಕೆ ಮಾತ್ರ ಮೀಸಲಾಗಿದ್ದ ಕಾರುಗಳ ಓಡಾಟವನ್ನು ಬಡ ಜನರೂ ಸಹ ಸದುಪಯೋಗ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ 2008ರಲ್ಲಿ ಕೇವಲ ಒಂದು ಲಕ್ಷಕ್ಕೆ ಟಾಟಾ ನ್ಯಾನೋಕಾರನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದ ಕೀರ್ತಿ ಅವರದ್ದು. ಕೈಗಾರಿಕಾ ಕ್ಷೇತ್ರದಲ್ಲಿ ಅವರು ಎಂದೂ ಹಿಂದೆ ಹೆಜ್ಜೆ ಇಡಲಿಲ್ಲ. ಸಾವಿರಾರು ಕೋಟಿ ಹಣವನ್ನು ವ್ಯವಹಾರದಲ್ಲಿ ತೊಡಗಿಸಿ ಲಾಭಕ್ಕಿಂತ ಮುಖ್ಯವಾಗಿ ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡಿದ ಮಹಾಹೃದಯವಂತರು ಎಂದು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ನೇತಾಜಿ ಪ್ರಸನ್ನ ಬಣ್ಣಿಸಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಟಿ.ಆರ್.ಚಂದ್ರಶೇಖರ್, ನಿರ್ದೇಶಕರಾದ ಆರ್.ಅಶೋಕ್, ಬಸವರಾಜು, ದಿವಾಕರ್, ನರಸಿಂಹ, ನಾಗೇಶ್, ಮಂಜುಸಾಯಿ, ನಾಗೇಶ್, ಚೇತನ್‌ಗಾಯಕ್ವಾಡ್, ದೊಡ್ಡೇರಿತಿಪ್ಪೇಶ್ ಮುಂತಾದವರು ಪಾಲ್ಗೊಂಡಿದ್ದರು.

## ಫಾಸ್ಟ್ ನ್ಯೂಸ್

### ಆಯುರ್ವೇದ ಕ್ಲಿನಿಕ್‌ಗಳಿಗೆ ಜಿಲ್ಲಾ ಆಯುಷ್ ಅಧಿಕಾರಿ ಭೇಟಿ, ಪರಿಶೀಲನೆ



» ಚಿತ್ರದುರ್ಗ

ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಆಯುರ್ವೇದ ಕ್ಲಿನಿಕ್‌ಗಳಿಗೆ ಗುರುವಾರ ಜಿಲ್ಲಾ ಆಯುಷ್ ಅಧಿಕಾರಿಗಳು ಹಾಗೂ ಖಾಸಗಿ ಆಸ್ಪತ್ರೆಗಳ ನಿಯಂತ್ರಣ ಮಂಡಳಿ ಕೆ.ಪಿ.ಎಂ.ಇ.ಎ ಸದಸ್ಯರಾದ ಡಾ.ಚಂದ್ರಕಾಂತ್ ನಾಗಸಮುದ್ರ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಆಸ್ಪತ್ರೆಗಳು ಆರೋಗ್ಯ ನೀಡುವ ತಾಣಗಳಾದ ಕಾರಣ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಆಸ್ಪತ್ರೆಯ ತ್ಯಾಜ್ಯವು ಸೋಂಕು ಹರಡುವಲ್ಲಿ ಸಹಕಾರಿಯಾಗಬಹುದು. ಆದ ಕಾರಣ ನಿಗದಿತ ಸಂಸ್ಥೆಗಳಿಗೇ ತ್ಯಾಜ್ಯ ವಿಲೇವಾರಿ ಮಾಡಬೇಕು. ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ವಿಶ್ರಾಂತಿ ಸ್ಥಳ ಇತ್ಯಾದಿ ಸ್ಥಳಾವಕಾಶವಿರಬೇಕು. ಲಭ್ಯ ಸೇವೆಗಳಿಗೆ ದರಪಟ್ಟಿ ಪ್ರದರ್ಶಿಸುವುದು ಕಡ್ಡಾಯ ಹಾಗೂ ಕ್ಲಿನಿಕ್‌ಗಳಿಗೆ ಪರಿಸರಮಂಡಳಿಯಅನುಮೋದನೆಪಡೆದಿರಬೇಕು ಎಂದು ಸೂಚಿಸಿದರು.ಕೆ.ಪಿ.ಎಂ.ಇ.ಎ ಕಾಯ್ದೆಯ ಅನುಸಾರ ಈ ಮೇಲ್ಕಂಡ ಎಲ್ಲಾ ನಿಯಮಗಳನ್ನು ಈಗಾಗಲೇ ಚಾಲ್ತಿಯಲ್ಲಿರುವ ಹಾಗೀಊ ಹೊಸದಾಗಿ ಆರಂಭಿಸುವ ಎಲ್ಲಾ ಆಯುಷ್ ಕ್ಲಿನಿಕ್‌ಗಳು ಪಾಲಿಸಬೇಕಾಗುತ್ತದೆ. ವೈದ್ಯಕೀಯ ಸೇವೆ ನೀಡುವ ಎಲ್ಲ ಕ್ಲಿನಿಕ್, ಆಸ್ಪತ್ರೆ ಇತ್ಯಾದಿ ಸಂಸ್ಥೆಗಳು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುವ ನಿಯಂತ್ರಣಾ ಪ್ರಾಧಿಕಾರವಾದ ಕೆ.ಪಿ.ಎಂ.ಇ.ಎ ಮಂಡಳಿಯಲ್ಲಿ ನೋಂದಾಯಿಸುವುದು ಹಾಗೂ ಕಾಲಕಾಲಕ್ಕೆ ನವೀಕರಿಸುವುದು ಕಡ್ಡಾಯವಾದೆ. ತಪ್ಪಿದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

### ವಾಲ್ಮೀಕಿ ಜಯಂತಿ

» ದಾವಣಗೆರೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 17 ರಂದು ಬೆಳಿಗ್ಗೆ 11.30ಕ್ಕೆ ನಗರದ ಎಂ.ಸಿ.ಸಿ.ಬಿ ಬ್ಲಾಕ್‌ನಲ್ಲಿರುವ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಶಾಸಕರಾದ ಡಾ.ಶಾಮನೂರು ಶಿವಶಂಕರಪ್ಪನವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ಹೊನ್ನಾಳಿ ಶಾಸಕ ಶಾಂತನಗೌಡ ಡಿ.ಜಿ, ಚನ್ನಗಿರಿ ಶಾಸಕ ಬಸವರಾಜು ವಿ.ಶಿವಗಂಗಾ, ಹರಿಹರ ಶಾಸಕ ಬಿ.ಪಿ ಹರೀಶ್, ಮಹಾನಗರ ಪಾಲಿಕೆ ಮೇಯರ್ ಚಮನ್ ಸಾಬ್. ಕೆ, ವಿಧಾನ ಪರಿಷತ್ ಶಾಸಕರಾದ ಎಸ್.ಎಲ್ ಭೋಜೇಗೌಡ, ಚಿದಾನಂದ. ಎಂ.ಗೌಡ, ಡಿ.ಎಸ್ ಅರುಣ್, ಕೆ.ಎಸ್ ನವೀನ್, ಕೆ.ಅಬ್ದುಲ್ ಜಬ್ಬಾರ್, ಡಾ.ಧನಂಜಯ್ ಸರ್ಜಿ, ಡಿ.ಟಿ.ಶ್ರೀನಿವಾಸ್, ದೂಡಾ ಅಧ್ಯಕ್ಷರಾದ ದಿನೇಶ್.ಕೆ.ಶೆಟ್ಟಿ, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಡಾ.ನವೀನ್.ಎಸ್.ಮಠದ ಉಪಸ್ಥಿತರಿರುವರು. ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಹೊಂಡದ ಸರ್ಕಲ್‌ನಲ್ಲಿರುವ ಶ್ರೀಶ್ರೀಶ್ರೀ ರಾಜವೀರ ಮದಕರಿ ನಾಯಕರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುತ್ತದೆ.

### ಆಡ್ಕರ್: ವಿವಿಧ ಯೋಜನೆಗಳಿಗೆ ಅರ್ಜಿ

» ಚಿತ್ರದುರ್ಗ

ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ 2024-25ನೇ ಸಾಲಿಗೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅರ್ಹ ಚರ್ಮಕುಶಲಕರ್ಮಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಕ್ಟೋಬರ್ 6 ರಿಂದ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಅ.30ರೊಳಗೆ ಸೇವಾ ಸಿಂಧು ಪೋರ್ಟಲ್, ಕರ್ನಾಟಕ ಒನ್, ಗ್ರಾಮ ಒನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕಾಯಕ ಸ್ಫೂರ್ತಿ ಯೋಜನೆ (ಮಹಿಳೆಯರಿಗೆ), ಪಾದುಕೆ ಕುಟೀರ ಯೋಜನೆ, ಮಾರುಕಟ್ಟೆ ಸಹಾಯ ಯೋಜನೆ, ಚರ್ಮಶಿಲ್ಪಿ ಯೋಜನೆ, ವಸತಿ ಕಾರ್ಯಾಗಾರ ಯೋಜನೆ, ಸ್ವಾವಲಂಬಿ/ಸಂಚಾರಿ ಮಾರಾಟ ಮಳಿಗೆ ಯೋಜನೆ, ನೇರಸಾಲ ಯೋಜನೆ ಹಾಗೂ ಕೌಶಲ್ಯ ಉನ್ನತೀಕರಣ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಚಿತ್ರದುರ್ಗ ನಗರದ ಬಿ.ಡಿ.ರಸ್ತೆಯ ಪ್ರವಾಸಿ ಮಂದಿರ ಹತ್ತಿರದ ಲಿಡ್‌ಕರ್ ನಿಗಮ ಜಿಲ್ಲಾ ಸಂಯೋಜಕರು 9449181136 ಗೆ ಸಂಪರ್ಕಿಸಿ.

# ಧರಣಿ ನಿರತ ಸ್ಥಳಕ್ಕೆ ತಿಪ್ಪಾರೆಡ್ಡಿ, ನವೀನ್ ಭೇಟಿ

» ಚಿತ್ರದುರ್ಗ



ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯುವ ಅಧಿವೇಶನದಲ್ಲಿ ಒಂದು ದಿನ ಪೂರ್ತಿ ನಿಮ್ಮ ಸಮಸ್ಯೆಗಳದ್ದೆ ಚರ್ಚೆಯಾಗಬೇಕೆಂದು ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್ ರಾಜ್ಯ ಸರ್ಕಾರದ ಮೇಲೆ ಒತ್ತಡ ತರುವುದಾಗಿ ಅನಿರ್ಧಿಷ್ಟಾವಧಿ ಧರಣಿ ನಡೆಸುತ್ತಿರುವವರಿಗೆ ಭರವಸೆ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಧಿಕಾರಿಗಳು ಮತ್ತು ನೌಕರರ ಎಲ್ಲಾ ವೃಂದದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ಜಿಲ್ಲಾ ಸಮಿತಿಯಿಂದ ಜಿಲ್ಲಾ ಪಂಚಾಯಿತಿ ಎದುರು ಏಳು ದಿನಗಳಿಂದ ಅನಿರ್ಧಿಷ್ಟಾವಧಿ ಧರಣಿ ನಡೆಸುತ್ತಿರುವವರನ್ನು ಕುರಿತು ಮಾತನಾಡಿದ ಕೆ.ಎಸ್.ನವೀನ್ ನಿಮ್ಮ ಎಲ್ಲಾ ಬೇಡಿಕೆಗಳು ನ್ಯಾಯಯುತವಾಗಿದೆ. ಅಸಂಬದ್ದವಾಗಿಲ್ಲ. ಗ್ರಾಮ ಪಂಚಾಯಿತಿಗಳನ್ನು ಪ್ರಜಾಪ್ರಭುತ್ವದ ಬೇರು ಎನ್ನಬೇಕು. ದೆಹಲಿಯಲ್ಲಿ ಪಾರ್ಲಿಮೆಂಟ್ ನಿಂತಿರುವುದೇ ಗ್ರಾಮ ಪಂಚಾಯಿತಿಗಳಿಂದ ನಿಮ್ಮ ಸಮಸ್ಯೆಗಳ ಕುರಿತು ಸದನದಲ್ಲಿ ಹೆಚ್ಚು ಚರ್ಚೆ ಮಾಡುತ್ತೇನೆ. ಈಗಾಗಲೆ ಪಂಚಾಯತ್‌ರಾಜ್ ಸಚಿವ ಮತ್ತು ಕಾರ್ಯದರ್ಶಿ ಜೊತೆ ಮಾತನಾಡಿದ್ದೇನೆ. ಆರ್.ಡಿ.ಪಿ.ಆರ್.ಕಮಿಟಿಯಲ್ಲಿ ಇಪ್ಪತ್ತು ಶಾಸಕರುಗಳಿದ್ದೇವೆ. ಪ್ರತಿ ವಾರ ಸದನದಲ್ಲಿ ಚರ್ಚೆಯಾಗುತ್ತದೆ. ಪಂಚಾಯತ್‌ರಾಜ್ ಸಚಿವ ಪ್ರಿಯಾಂಕಖರ್ಗೆ ಒಮ್ಮೆಯೂ ಗ್ರಾಮೀಣ ಭಾಗಕ್ಕೆ ಹೋಗಿಲ್ಲ. ಅಂತಹವರಿಗೆ ನಿಮ್ಮ ಬೇಡಿಕೆಗಳ ಬಗ್ಗೆ ಏನು ಗೊತ್ತು ಎಂದು ಖಾರವಾಗಿ ಪ್ರಶ್ನಿಸಿದರು.?


ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಒಂದು ದಿನ ಪೂರ್ತಿ ನಿಮ್ಮಗಳ ಸಮಸ್ಯೆಗಳ ಕುರಿತು ಚರ್ಚೆಯಾಗಬೇಕು. ಆದಾಯವಿಲ್ಲದೆ ಗ್ರಾಮ ಪಂಚಾಯಿತಿಗಳನ್ನು ನಡೆಸುವುದು ಹೇಗೆ? ಐದನೇ ಹಣಕಾಸು ಆಯೋಗಕ್ಕೆ ಸಲಹೆ ನೀಡಿದ್ದೇನೆ. ಒಂದು ಕೋಟಿ ರು.ಅನುದಾನವನ್ನು ಮೊದಲು ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕು. ನಿಮ್ಮ ಸಮಸ್ಯೆಗಳನ್ನು ಗಂಭೀರವಾಗಿ ತೆಗೆದುಕೊಂಡು ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗೋಣ ಎಂದು ಕೆ.ಎಸ್.ನವೀನ್ ಹೇಳಿದರು.

ಮಾಜಿ ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿ ಮಾತನಾಡಿ ನಿಮ್ಮ ಬೇಡಿಕೆಗಳ ಕುರಿತು ಒಂದೆರಡು ದಿನಗಳ ಕಾಲ ಸದನದಲ್ಲಿ ಚರ್ಚೆಯಾದಾಗ ಮಾತ್ರ ರಾಜ್ಯ ಸರ್ಕಾರಕ್ಕೆ ನಿಮ್ಮ ಸಮಸ್ಯೆಗಳು ಅರಿವಿಗೆ ಬರುತ್ತದೆ. ಬಿಜೆಪಿ.ಯಿಂದ ಪ್ರಮುಖವಾಗಿ ಚರ್ಚೆಯಾಗಬೇಕು. ವಿಧಾನಪರಿಷತ್‌ನಲ್ಲಿ 25 ಕ್ಕೂ ಹೆಚ್ಚು ಶಾಸಕರುಗಳು ಗ್ರಾಮ ಪಂಚಾಯಿತಿ ಸದಸ್ಯರುಗಳಿಂದ ಆಯ್ಕೆಯಾದವರು. ಅವರಿಗೆ ನಿಮ್ಮ ಸಮಸ್ಯೆಗಳು ಏನೆಂಬುದು ಚೆನ್ನಾಗಿ ಗೊತ್ತಿದೆ. ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ ಖರ್ಗೆ ಬಿಷಪ್‌ಕಾಟನ್ ಶಾಲೆಯಲ್ಲಿ ಓದಿದವರು ಅಪ್ಪಿತಪ್ಪಿಯೂ ಹಳ್ಳಿಗಳ ಕಡೆ ತಿರುಗಾಡಿಲ್ಲ. ಹಾಗಾಗಿ ಗ್ರಾಮ ಪಂಚಾಯಿತಿ ನೌಕರರು ಹಾಗೂ ಪಿಡಿಓ.ಗಳು ಅನುಭವಿಸುತ್ತಿರುವ ತೊಂದರೆಗಳೇನೆಂಬುದು ಗೊತ್ತಿಲ್ಲ. ನಿಮ್ಮ ಹೋರಾಟದ ಜೊತೆ ಸದಾ ನಾವುಗಳಿರುತ್ತೇವೆಂದು ಭರವಸೆ ನೀಡಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ಟಿ.ತಿಮ್ಮಾರೆಡ್ಡಿ ಸೇರಿದಂತೆ ಪಿ.ಡಿ.ಓ.ಗಳು ಮತ್ತು ಗ್ರಾಮ ಪಂಚಾಯಿತಿ ಸದಸ್ಯರುಗಳ ಒಕ್ಕೂಟ ಜಿಲ್ಲಾ ಸಮಿತಿಯವರು ಧರಣಿಯಲ್ಲಿ ಭಾಗವಹಿಸಿದ್ದರು.

## ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಮಹಿಳಾ ಸಂಘಗಳು ಹೆಚ್ಚು ಶ್ರಮಿಸಬೇಕು: ಸಂಜೀವಮೂರ್ತಿ

» ಚಳ್ಳಕೆರೆ



ಕಳೆದ ಹಲವಾರು ವರ್ಷಗಳಿಂದ ನಂದಿನಿ ಹಾಲು ಉತ್ಪನ್ನದ್ದಲ್ಲಿ ಗಣನೀಯವಾದ ಏರಿಕೆಯಾಗಿದ್ದು, ರೈತ ಸಮುದಾಯಕ್ಕೂ ಸಹ ಉತ್ತಮ ಬೆಲೆ ನೀಡುವಲ್ಲಿ ಶಿವಮೊಗ್ಗಹಾಲು ಒಕ್ಕೂಟ ಯಶಸ್ವಿಯಾಗಿದೆ. ಹೈನುಗಾರಿಕೆಯನ್ನು ಉತ್ತೇಜಿಸಲು ಹಲವಾರು ಯೋಜನೆ ಜಾರಿಗೆ ತಂದಿದೆ. ವಿಶೇಷವಾಗಿ ಮಹಿಳೆಯರು ಹಾಲುಸಂಗ್ರಹ ಘಟಕ ಸ್ಥಾಪನೆ ಮೂಲಕ ತಾವುಸಹ ಹೈನುಗಾರಿಕೆಯನ್ನು ಉತ್ತಮವಾಗಿ ನಡೆಸಿಕೊಂಡು ಬರಲು ಸಫಲರು ಎಂದು ಶಿವಮೊಗ್ಗ ಹಾಲುಒಕ್ಕೂಟದ ಚಿತ್ರದುರ್ಗ ಜಿಲ್ಲಾ ನಿರ್ದೇಶಕ ಬಿ.ಸಿ.ಸಂಜೀವಮೂರ್ತಿ ಸಂತಸ ವ್ಯಕ್ತಪಡಿಸಿದರು.

ಅವರು, ಗುರುವಾರ ತಳಕು ಹೋಬಳಿ ಘಟಪರ್ತಿ ಪಂಚಾಯಿತಿ ವ್ಯಾಪ್ತಿಯ ಮಾರಮ್ಮನಹಳ್ಳಿಯಲ್ಲಿಮಹಿಳಾಸಹಕಾರಸಂಘದ ಹಾಲುಸಂಗ್ರಹ ಘಟಕ ಪ್ರಾರಂಭೋತ್ಸವವನ್ನು ನೆರವೇರಿಸಿ ಮಾತನಾಡಿದರು. ತಾಲ್ಲೂಕಿನಾದ್ಯಂತ ನೂರಾರು ಹಾಲು ಉತ್ಪಾದಕರ ಸಂಘ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ಗುಣಮಟ್ಟದ ಹಾಲುಖರೀದಿಸಿ ನೀಡುವಂತೆ ಮನವಿ ಮಾಡಿದರು. ಮಹಿಳೆಯರೇ ಸ್ವಯಂಪ್ರೇರಣೆಯಿಂದ ಗ್ರಾಮದಲ್ಲಿ ಉತ್ಪಾದನಾ ಘಟಕ ಸ್ಥಾಪಿಸಿದ್ದು ಸಂತಸ ತಂದಿದೆ. ಎಲ್ಲರೂ ಯಶಸ್ವಿಯಾಗಲಿ ಎಂದು ಶುಭಹಾರೈಸುವೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷೆ ಜೆ.ಲಕ್ಷ್ಮಮ್ಮ, ಉಪಾಧ್ಯಕ್ಷೆ ಸುನೀತಮ್ಮ, ಮುಖ್ಯಕಾರ್ಯದರ್ಶಿ ರತ್ನಮ್ಮ, ಹಾಲುಪರಿವೀಕ್ಷಕ ಎನ್.ಬಸವರಾಜು, ಮಾರ್ಗವಿಸ್ತಾರಣಾಧಿಕಾರಿ ನಯಾಜ್‌ಬೇಗ್ ಮುಂತಾದವರು ಉಪಸ್ಥಿತರಿದ್ದರು.

## ಉದ್ಯಮಿ ರತನ್ ಟಾಟಾರವರ ನಿಧನಕ್ಕೆ ಅಹಿಂದಾದಿಂದ ಶ್ರದ್ಧಾಂಜಲಿ



» ಚಿತ್ರದುರ್ಗ

ಭಾರತದ ಉದ್ಯಮಿ ರತನ್ ಟಾಟಾರವರ ನಿಧನಕ್ಕೆ ಅಹಿಂದಾ ವತಿಯಿಂದ ಪ್ರವಾಸಿ ಮಂದಿರದಲ್ಲಿ ಗುರುವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಲೇಖಕ ಹೆಚ್.ಆನಂದ್‌ಕುಮಾರ್ ಮಾತನಾಡಿ ರತನ್‌ಟಾಟಾರವರ ನಿಧನದಿಂದ ಕಾರ್ಮಿಕರು, ಬಡವರು, ಕೆಳವರ್ಗದವರಿಗೆ ನಷ್ಟವುಂಟಾಗಿದೆ. ಶಿಸ್ತು, ಬದ್ದತೆ, ಪ್ರಾಮಾಣಿಕತೆ ಅವರಲ್ಲಿತ್ತು. ತಮ್ಮ ಕಂಪನಿಯಲ್ಲಿ ದುಡಿಯುತ್ತಿದ್ದ ಕಾರ್ಮಿಕರಿಗೆ ಸಿಂಹಪಾಲು ಕೊಡುತ್ತಿದ್ದರು. ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪುಸ್ತಕಗಳನ್ನು ಚೆನ್ನಾಗಿ ಓದಿಕೊಂಡಿದ್ದ ರತನ್‌ಟಾಟಾ ತಮ್ಮ ದುಡಿಮೆಯಲ್ಲಿ ಶೇ.60 ರಷ್ಟು ಹಣವನ್ನು ಬಡವರಿಗಾಗಿ ದಾನ ಮಾಡುತ್ತಿದ್ದರು. ಸದಾ ಕೆಳವರ್ಗದವರ ಕುರಿತು ಚಿಂತಿಸುತ್ತಿದ್ದರು. ಅವರ ಆತ್ಮಕ್ಕೆ ಭಗವಂತ ನೆಮ್ಮದಿ ಕೊಡಲಿ ಎಂದು ಪ್ರಾರ್ಥಿಸಿದರು. ಅಹಿಂದಾ ಸಂಚಾಲಕ ಕೆಂಚಪ್ಪ, ಕಣಿವೆಮಾರಮ್ಮ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ, ಹರೀಶ್, ರಾಜು, ಮಲ್ಲಿಕಾರ್ಜುನಪ್ಪ, ಜಗ್ಗಣ್ಣ, ನಾಗಣ್ಣ, ಸತ್ಯಪ್ಪ ಮಲ್ಲಾಪುರ, ಪಾಲಯ್ಯ ಇನ್ನು ಅನೇಕರು ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡಿದ್ದರು.

## ಕ್ಷಯರೋಗದ ಬಗ್ಗೆ ಸಾರ್ವಜನಿಕರಿಗೆ ವ್ಯಾಪಕ ಜಾಗೃತಿ ಮೂಡಿಸಿ; ಡಿಸಿ

» ದಾವಣಗೆರೆ

ಕುಷ್ಠರೋಗ, ಕ್ಷಯರೋಗದ ಕುರಿತಂತೆ ಸಾರ್ವಜನಿಕರಿಗೆ ವ್ಯಾಪಕವಾಗಿ ಮಾಹಿತಿ ನೀಡಬೇಕುಎಂದುಜಿಲ್ಲಾಧಿಕಾರಿಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು. ಅವರು(ಅ.10) ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಕುಷ್ಠರೋಗ ಅಭಿಯಾನ ಕಾರ್ಯಕ್ರಮದ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ಆಶಾ ಕಾರ್ಯಕರ್ತೆಯರು, ಸ್ಥಳೀಯ ವೈದ್ಯರು ಗ್ರಾಮದ ಪ್ರತಿ ಮನೆಮನೆಗೂ ಭೇಟಿ ನೀಡಿ ಕುಷ್ಠರೋಗ ಪತ್ತೆ ಹಚ್ಚುವ ಬಗ್ಗೆ ಮಾಹಿತಿ ನೀಡಬೇಕು. ಪ್ರತಿಯೊಬ್ಬರನ್ನು ತಪಾಸಣೆ ಮಾಡಿ ಕುಷ್ಠರೋಗದ ಪ್ರಾರಂಭಿಕ ಗುಣಲಕ್ಷಣಗಳನ್ನು ಖಚಿತಪಡಿಸಿಕೊಂಡು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಚಿಕಿತ್ಸೆ ನೀಡಬೇಕು ಎಂದು ತಿಳಿಸಿದರು. ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ. ಅತಿ ಹೆಚ್ಚು ಮರಣ ಹೊಂದಿದ ಪ್ರದೇಶಗಳಲ್ಲಿ ಕ್ಷಯರೋಗ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿ, ಪ್ರತಿ ತಾಲ್ಲೂಕು ಗ್ರಾಮ ಪಂಚಾಯತಿ ವ್ಯಾಪ್ತಿಯೊಳಗಿನ ಗ್ರಾಮಗಳ ಮನೆ ಮನೆಗೆ ತೆರಳಿ ಪರಿಶೀಲನೆ ಮಾಡಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಜಿಲ್ಲಾಕ್ಷಯರೋಗಅಧಿಕಾರಿಸಭೆಯಲ್ಲಿಮಾಹಿತಿ ನೀಡಿ ಜಿಲ್ಲೆಯ 32 ಗ್ರಾಮ ಪಂಚಾಯತಿಗಳು ಕ್ಷಯರೋಗ ಮುಕ್ತ ಪಂಚಾಯಿತಿಗಳಾಗಿವೆ. 2024 ರ ಸೆಪ್ಟಂಬರ್ ತಿಂಗಳಲ್ಲಿ 49 ಕುಷ್ಠರೋಗಿಗಳು ಗುಣಮುಖರಾಗಿದ್ದು 29 ಹೊಸ ಕೇಸ್ ದಾಖಲಾಗಿರುತ್ತಾರೆ. ಹಾಗೂ ಕ್ಷಯರೋಗ ಚಿಕಿತ್ಸೆ ಪಡೆಯುವ ರೋಗಿಗಳಿಗೆ ತಿಂಗಳಿಗೆ ರೂ 500 ನೀಡಲಾಗುತ್ತಿದ್ದು.



## ಪ್ರಮುಖ ಸುದ್ದಿ

# ಯಾವುದೇ ಜಾತಿಗೆ ಅವಮಾನ ಮಾಡಬೇಕೆಂಬ ಉದ್ದೇಶ ಇಲ್ಲ

» ಚಿತ್ರದುರ್ಗ



ಖಾಸಗಿ ಟಿ.ವಿ.ಯೊಂದರ ಅನುಬಂಧ ಕಾರ್ಯಕ್ರಮವೊಂದರಲ್ಲಿ ವಡ್ಡ ಎಂಬ ಪದವನ್ನು ಬಳಕೆ ಮಾಡಿದ ಹಿನ್ನಲೆಯಲ್ಲಿ ಭೋವಿ ಸಮಾಜದವರು ಪೋಲಿಸ್ ಠಾಣೆಗೆ ದೂರನ್ನು ನೀಡಿದ್ದರು, ಈ ಹಿನ್ನಲೆಯಲ್ಲಿ ಇಂದು ಕಲಾವಿದರಾದ ಹುಲಿ ಕಾರ್ತಿಕ, ಶಿವು ಹಾಗೂ ನಂದೀಶ ರವರು ಇಂದು ಭೋವಿ ಸಮಾಜದ ಗುರುಪೀಠಕ್ಕೆ ಭೇಟಿ ನೀಡುವುದರ ಮೂಲಕ ಗುರುಗಳಾದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳ ಮುಂದೆ ಅಲ್ಲಿ ಏನು ನಡೆಯಿತು ಎಂಬುದನ್ನು ತಿಳಿಸಿ ನಾವು ಆಡಿದ ನಾಟಕದಲ್ಲಿ ಈ ರೀತಿಯ ಪದವನ್ನು ಬಳಕೆ ಮಾಡಿಲ್ಲ ಅಲ್ಲಿನ ಧ್ವನಿವರ್ಧಕದಿಂದ ಈ ರೀತಿಯಾಗಿ ಕೇಳಿಸಿರಬಹುದು, ಇದರಿಂದ ಈ ಜನಾಂಗಕ್ಕೆ ನೋವಾಗಿದ್ದರೆ. ನಾನು ಕ್ಷಮೆಯನ್ನು ಯಾಚಿಸುವುದಾಗಿ ಹುಲಿ ಕಾರ್ತಿಕ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು, ಬಡವರ ಮಕ್ಕಳು ಬೆಳೆಯಬೇಕು, ಇದಕ್ಕೆ ಯಾವುದೇ ರೀತಿಯ ಅಡ್ಡಿ ಬರಬಾರದು, ಕಲಾವಿದರಾದರಿಗೆ ಯಾವುದೆ ರೀತಿಯ ಜಾತಿ, ಧರ್ಮ, ಜನಾಂಗ ಇಲ್ಲ ಎಲ್ಲರನ್ನು ಸಹಾ ಒಂದೇ ರೀತಿಯಲ್ಲಿ ನೋಡಲಾಗುತ್ತದೆ. ಇಲ್ಲಿ ಕಾರ್ಯಕ್ರಮವೊಂದರಲ್ಲಿ ನಡೆದ ಸಮಾರಂಭದಲ್ಲಿ ವಡ್ಡ ಎಂಬ ಪದವನ್ನು ಬಳಕೆ ಮಾಡಲಾಗಿದೆ ಎಂದು ನಮ್ಮ ಸಮಾಜದವರು ದೂರನ್ನು ನೀಡಲಾಗಿದೆ ಇದರಿಂದ ಮನನೊಂದ ಹುಲಿ ಕಾರ್ತಿಕರವರು ನಮ್ಮ ಬಳಿ ಬಂದು ತಮ್ಮ ನೋವನ್ನು ಹೇಳಿಕೊಂಡಿದ್ದಾರೆ. ಅಂದು ನಡೆದ ವಿಷಯವನ್ನು ಸಹಾ ತಿಳಿಸಿದ್ದಾರೆ, ಈ ವಿಷಯವನ್ನು ದೊಡ್ಡದು ಮಾಡುವುದು ಬೇಡ ಇದನ್ನು ಇಲ್ಲಿಗೆ ಬಿಡುವುದು ಸೂಕ್ತ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಮುಂದುವರೆಯುವುದು ಸರಿಯಲ್ಲ ಎಂದರು.

ಖಾಸಗಿ ಟಿ.ವಿ.ಯೊಂದರ ಅನುಬಂಧ ಕಾರ್ಯಕ್ರಮದಲ್ಲಿ ನಡೆದ ಸನ್ನಿವೇಶದಲ್ಲಿ ಹೊಂಡ ಎಂಬ ಪದವೂ ಬಳಕೆಯಾಗಿದ್ದು ಅದು ಕೇಳಿಸುವಾ ವಡ್ಡ ಎಂದು ಕೇಳಿಸಿದೆ ಇದನ್ನು ಖಂಡಿಸಿ ನಮ್ಮ ಶಿಷ್ಯ ವರ್ಗ ಇದರ ಬಗ್ಗೆ ಕಾನೂನು ರೀತಿಯಲ್ಲಿ ದೂರನ್ನು ನೀಡಿದ್ದರು. ಇದನ್ನು ತಿಳಿದ ಹುಲಿ ಕಾರ್ತಿಕ ತಮ್ಮ ತಂಡದೊಂದಿಗೆ ನಮ್ಮ ಗುರುಪೀಠಕ್ಕೇ ಬೇಟಿ ನೀಡಿ ಅಲ್ಲಿನ ನಡೆದ ಎಲ್ಲಾ ರೀತಿಯ ವಿಷಯವನ್ನು ತಿಳಿಸಿದ್ದಾರೆ. ಇದು ಈ ರೀತಿ ಇತ್ತು ಆದರೆ ಈ ರೀತಿಯಾಗಿ ಕೇಳಿದೆ ಈ ಹಿನ್ನಲೆಯಲ್ಲಿ ನಮ್ಮ ಬಳಿ ಕ್ಷಮೆಯನ್ನು ಕೇಳಿದ್ದಾರೆ. ಯಾರ ಭಾವನೆ, ಯಾವ ಜಾತಿಗೆ, ಯಾವುದೇ ಧರ್ಮ ಹಾಗೂ ಯಾವುದೆ ಮತೀಯಕ್ಕೆ ನಾವು ನಿಂದನೆ ಅಪಚಾರ ಅವಮಾನವನ್ನು ಮಾಡಿಲ್ಲ, ನಮ್ಮ ಕಾಯಕ ನಮ್ಮ ಕರ್ತವ್ಯ, ಕೇವಲ ಎಲ್ಲರ ಮುಖದಲ್ಲಿ ಮಂದಹಾಸವನ್ನು ಮೂಡಿಸುವುದು ಆಗಿದೆ. ನಗುವನ್ನು ಕಾಣಿಸುವಂತಹುದು. ಬಂದಿಷ್ಟು ಕಾಲ ಅವರು ದುಃಖವನ್ನು ಮರೆತು ಕಷ್ಟಗಳನ್ನು ಕಾರ್ಪಣ್ಯಗಳನ್ನು ಮರೆತು, ಕೆಲ ಕಾಲ ಸಂತಸದಿಂದ ಇಡುವುದು ನಮ್ಮ ಕಾಯಕವಾಗಿದೆ.

ಈ ಹಿನ್ನಲೆಯಲ್ಲಿ ನಮ್ಮಿಂದ ಅವರ ಮುಖ ಚರ್ಯದಲ್ಲಿ ಏನಾದರೂ ನೋವಾಗಿದ್ದರೆ, ಹೃದಯಕ್ಕೆ ಘಾಸಿಯಾಗಿದ್ದರೆ. ನಾವು ಕ್ಷಮೆಯನ್ನು ಕೇಳುತ್ತೇವೆ, ಯಾವುದೇ ಕಾರಣಕ್ಕೂ ನಮ್ಮಿಂದ ಘಾಸಿಯಾಗಬಾರದೆಂದು ಹೇಳಿದ್ದಾರೆ. ಅವರು ನಿಲ್ಕಮಷ ಹೃದಯವರಾಗಿದ್ದಾರೆ. ಅವರು ಬಡತನದಿಂದ ಬಂದವರಾಗಿದ್ದಾರೆ. ಪ್ರತಿಭಾವಂತರಿದ್ದಾರೆ ಈಗ ತಾನೇ ಬೆಳೆಯುತ್ತಿದ್ದಾರೆ. ಬಡವರ ಮಕ್ಕಳು ಬಳೆಯಬೇಕು, ಬಡವರ ಮಕ್ಕಳು ಬಾಳಬೇಕು, ಬಡವರ ಮಕ್ಕಳು ಮೆರೆಯಬೇಕು, ಎನ್ನುವುದು ನಮ್ಮ ಗುರುಪೀಠದ ಉದ್ದೇಶವಾಗಿ ಇಂತಹ ಪ್ರತಿಭೆಗಳಿಗೆ ನಮ್ಮ ಗುರುಪೀಠ ಪ್ರೋತ್ಸಾಹವನ್ನು ನೀಡುತ್ತದೆ ಹೊರೆತು ಚಿವುಟುವ ಕೆಲಸವನ್ನು ಮಾಡುವುದಿಲ್ಲ ಬೆಳೆಯುತ್ತಿರುವ ಈ ಪ್ರತಿಭೆಗಳಿಗೆ ನಮ್ಮ ಶಿಷ್ಯರಿಂದ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ, ಅವರ ಬೆಳವಣಿಗೆಗೆ ಧಕ್ಕೆಯಾಗುವುದಿಲ್ಲ, ಅವರ ಕಲಾ ಸೇವೆಯನ್ನು ಧೈರ್ಯವಾಗಿ ಮುನ್ನಡೆಸಬಹುದಾಗಿದೆ. ಅವರ ಜೊತೆಯಲ್ಲಿ ಈ ಸಮುದಾಯ ಗುರುಪೀಠ ಇದೆ. ಅವರ ಕಾರ್ಯಕ್ರಮಗಳನ್ನು ನಮ್ಮ ಶಿಷ್ಯ ವರ್ಗ ಹೆಚ್ಚಿನ ರೀತಿಯಲ್ಲಿ ನೋಡುವುದರ ಮೂಲಕ ಪ್ರೋತ್ಸಾಹವನ್ನು ನೀಡುತ್ತದೆ ಅವರ ಭವಿಷ್ಯದ ದಿನದಲ್ಲಿ ಶ್ರೀಮಠ ಹಾಗೂ ಗುರುಪೀಠದ ಆರ್ಶೀವಾದ ಇರುತ್ತದೆ ಎಂದು ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹುಲಿ ಕಾರ್ತಿಕ ಯಾವುದೇ ಜನಾಂಗ ಜಾತಿಗೆ ಅವಮಾನ ಮಾಡಬೇಕೆಂಬ ಉದ್ದೇಶ ಇಲ್ಲ ಆದರೆ ತಾಂತ್ರಿಕ ಕಾರಣದಿಂದ ಈ ರೀತಿಯಾಗಿ ಕೇಳಿಸಿದೆ. ನಾವು ನಗಿಸುವ ಕಾರ್ಯವನ್ನು ಮಾತ್ರ ಮಾಡುತ್ತೇವೆ ನೋವಿಸುವ ಕಾರ್ಯವನ್ನು ಮಾಡುವುದಿಲ್ಲ, ಆದರೂ ಸಹಾ ನಮ್ಮಿಂದ ನೋವಾಗಿದೆ ಎನ್ನುವುದಾದರೆ ನಾವು ಕ್ಷಮೆಯನ್ನು ಯಾಚಿಸುತ್ತೇವೆ. ಯಾರಿಗೂ ನೋವಿಸುವ ಅಧಿಕಾರ ಇಲ್ಲ, ನಮ್ಮ ಛಾನಲ್ ಎಷ್ಟು ಬೇಕಾದರೂ ನಗಿಸಿ ಆದರೆ ನೋವನ್ನು ಮಾಡಬೇಡಿ ಎಂದು ಹೇಳಿದೆ. ಕಾರ್ಯಕ್ರಮದಲ್ಲಿ ಪ್ರಾಸಕ್ಕಾಗಿ ಪದವನ್ನು ಬಳಕೆ ಮಾಡಲಾಗಿದೆ ಇಲ್ಲಿ ಯಾವ ಜನಾಂಗವನ್ನು ನೋವಿಸುವ ಉದ್ದೇಶ ಇಲ್ಲ, ಈ ಹಿನ್ನಲೆಯಲ್ಲಿ ಇಂದು ಭೋವಿ ಮಠಕ್ಕೇ ಬೇಟಿ ನೀಡುವುದರ ಮೂಲಕ ಶ್ರೀಗಳ ಆರ್ಶೀವಾದವನ್ನು ಪಡೆಯಲಾಗಿದೆ. ಮಠಕ್ಕೆ ಬೇಟಿ ಮಾಡಿದ್ದರಿಂದ ನಮ್ಮ ಒಳಗಡೆ ಇದ್ದ ನೋವೆಲ್ಲಾ ಮಾಯವಾಗಿ ನಮಗೆ ಧೈರ್ಯ ಬಂದಂತೆ ಅಗಿದೆ. ನಾನು ಗುರುಪೀಠಕ್ಕೆ ಚಿರಋಣಿಯಾಗಿರುತ್ತೇನೆ ಎಂದರು.

ಮತ್ತೋರ್ವ ಕಲಾವಿದ ಶಿವು ಮಾತನಾಡಿ, ಗುರುಗಳು ನಮಗೆ ಆಭಯವನ್ನು ನೀಡಿದ್ದಾರೆ ನಮ್ಮ ಶಿಷ್ಯರ ಕಡೆಯಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ಆಭಯವನ್ನು ನೀಡಿದ್ದಾರೆ. ನಾವು ಇಲ್ಲಿಗೆ ಬಂದಾಗ ಶ್ರೀಗಳು ಪ್ರೀತಿಯಿಂದ ಮಾತನಾಡಿಸಿ ನಮ್ಮ ಸಮಸ್ಯೆಯನ್ನು ಪರಿಹಾರ ಮಾಡಿದ್ದಾರೆ. ಮಠಕ್ಕೆ ಹಾಗೂ ಗುರುಗಳಿಗೆ ನಾವು ಅಭಾರಿಯಾಗಿರುತ್ತೇವೆ.ನಮ್ಮ ಕಡೆಯಿಂದ ಈ ರೀತಿಯಾದ ಅನಾಹುತ ಮುಂದಿನ ದಿನಮಾನದಲ್ಲಿ ನಡೆಯಲು ಬಿಡುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ವಿವಿಧ ಮಠದ ಶ್ರೀಗಳು, ಭೋವಿ ಸಮಾಜದ ಅಧ್ಯಕ್ಷರಾದ ತಿಪ್ಪೇಸ್ವಾಮಿ, ಸಿಇಓ ಗೋವಿಂದಪ್ಪ, ಚಂದ್ರು, ರಾಘವೇಂದ್ರ ಉಪಸ್ಥಿತರಿದ್ದರು.

**ಫಾಸ್ಟ್ ನ್ಯೂಸ್**

## ಶರಣಸಂಸ್ಕೃತಿ ಉತ್ಸವದಲ್ಲಿಂದು

- ಬೆಳಗ್ಗೆ 7.30 ಗಂಟೆಗೆ ಶಿವಯೋಗ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ದಾವಣಗೆರೆ ವಿರಕ್ತಮಠದ ಡಾ.ಶ್ರೀ. ಬಸವಪ್ರಭು ಸ್ವಾಮೀಜಿ ನಡೆಸಿಕೊಡಲಿದ್ದು, ಬ್ಯಾಡಿಗಿಯ ಶ್ರೀ ಮುಪ್ಪಿನಸ್ವಾಮಿ ವಿರಕ್ತ ಮಠದ ಶ್ರೀ. ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ಅಗಡಿ ಅಕ್ಕಿ ಮಠದ ಶ್ರೀ ಗುರುಲಿಂಗ ಸ್ವಾಮೀಜಿ, ಶಿಕಾರಿಪುರದ ಶ್ರೀ.ಮುರುಘಾಮಠದ ಚನ್ನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.
- ಮುಖ್ಯ ಅತಿಥಿಗಳಾಗಿ ಧಾರವಾಡ ಬಸವಕೇಂದ್ರದ ಸಿದ್ರಾಮಣ್ಣ ನಡಕಟ್ಟಿ, ಹುಬ್ಬಳ್ಳಿ ಬಸವಕೇಂದ್ರದ ಶ್ರೀ ಜಿ.ಬಿ.ಹಳ್ಯಾಳ, ಮಾನವಿ ಬಸವಕೇಂದ್ರದ ಡಾ.ಬಸವಪ್ರಭು ಪಾಟೀಲ ಬೆಟ್ಟದೂರ, ಗದಗ ಬಸವಕೇಂದ್ರದ ಶ್ರೀ. ಕೆ.ಎಸ್.ಚೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.
- ಸಂಜೆ 6.00 ಗಂಟೆಗೆ ಅನುಭವ ಮಂಟಪದಲ್ಲಿ ಏರ್ಪಡಿಸಿರುವ ಮಹಿಳಾ ಸಮಾವೇಶದಲ್ಲಿ ಕೂಡಲ ಸಂಗಮ ಬಸವ ಧರ್ಮ ಪೀಠದ ಜಗದ್ಗುರು ಮಹಾಮಾತೆ ಗಂಗಾದೇವಿ ಸಾನ್ನಿಧ್ಯವಹಿಸುವರು. ಹರಿಹರ ಶ್ರೀ ವೀರಶೈವ ಪಂಚಮಸಾಲಿ ಗುರುಪೀಠದ ಶ್ರೀ.ಜಗದ್ಗುರು ವಚನಾನಂದ ಸ್ವಾಮೀಜಿ ಸಮ್ಮುಖ ವಹಿಸುವರು.
- ನಾಗನೂರು ಬಸವಧರ್ಮ ಪ್ರಚಾರಕ ಸಂಸ್ಥೆಯ ಕಾರ್ಯದರ್ಶಿ ಶರಣೆ ಡಿ.ಪಿ.ನಿವೇದಿತಾ, ದಾವಣಗೆರೆಯ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಹರಪ್ಪನಹಳ್ಳಿ ಶಾಸಕರಾದ ಶ್ರೀಮತಿ.ಎಂ.ಪಿ.ಲತಾ ಮಲ್ಲಿಕಾರ್ಜುನ್, ನಿಪ್ಪಾಣಿ ಮಾಜಿಮಂತ್ರಿಗಳು ಹಾಗು ಶಾಸಕರಾದ ಶ್ರೀಮತಿ. ಶಶಿಕಲಾ ಜೊಲ್ಲೆ, ಹಿರಿಯೂರು ಮಾಜಿ ಶಾಸಕರಾದ ಶ್ರೀಮತಿ. ಕೆ. ಪೂರ್ಣಿಮಾ ಶ್ರೀನಿವಾಸ್, ಬೆಂಗಳೂರು ಪ್ರಜಾವಾಣಿ ಉಪ ಮುಖ್ಯಸಂಪಾದಕಿ ಶ್ರೀಮತಿ.ಎಸ್.ರಶ್ಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.
- ಅರಸೀಕೆರೆಯ ಶ್ರೀ.ಜಯದೇವ ವಿದ್ಯಾರ್ಥಿ ನಿಲಯದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿರುವರು.
- ಗದಗದ ಶ್ರೀ. ಸಚ್ಚಿದಾನಂದ ಪ್ರಭು ಅನ್ನದಾನೇಶ್ವರ ತುಪ್ಪದ, ಶ್ರೀ.ರಾಜು ಅಜ್ಜಪ್ಪ ಮಾನ್ವಿ, ಬಿ.ಎಲ್.ಡಿ ಸಮಕುಲಾಧಿಪತಿಗಳಾದ ಡಾ.ವೈ. ಜಯರಾಜ್, ಭರಮಸಾಗರದ ಶ್ರೀ. ಶಿವಬಸಯ್ಯ ಹಿರೇಮಠ ಇವರುಗಳನ್ನು ಸನ್ಮಾನಿಸಲಾಗುವುದು.
- ಜಮುರಾ ಕಲಾವಿದರು ಹಾಗೂ ಗಾನಯೋಗಿ ಸಂಗೀತ ಬಳಗದ ಸದಸ್ಯರಿಂದ ಜಯದೇವ ಜ್ಯೋತಿ ರೂಪಕ, ಎಸ್.ಜೆ.ಎಂ. ಆಂಗ್ಲ ಮಾದ್ಯಮ ಶಾಲೆ, ಎಸ್.ಜೆ.ಎಂ.ಪಾಲಿಟೆಕ್ನಿಕ್, ಎಸ್.ಜೆ.ಎಂ.ಔಷಧೀಯ ಮಹಾವಿದ್ಯಾಲಯ, ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ, ಎಸ್.ಜೆ.ಎಂ.ದಂತ ಮಹಾವಿದ್ಯಾಲಯ, ಎಸ್.ಜೆ.ಎಂ.ತಾಂತ್ರಿಕ ಮಹಾವಿದ್ಯಾಲಯ, ಭರಮಸಾಗರದ ಕು.ಬಿ.ಎಸ್.ಭೂಮಿಕ ಮತ್ತು ಸಂಗಡಿಗರಿಂದ ಸಾಂಸ್ಕೃತಿಕ ಸಂಭ್ರಮ ನಡೆಯಲಿವೆ.




ಮಾತಿನ ಸಮಾನವರ್ತಿ ಶಬ್ದಗಳಾಗಿ ನುಡಿ, ಭಾಷೆ, ವಚನ, ಪದ ಮತ್ತು ಪ್ರಮಾಣಗಳನ್ನು ಬಳಸುತ್ತೇವೆ. ಮಾತಿಗೆ ಬದ್ಧವಾಗಿ ನಡೆಯುವುದು ಜನಜೀವನದ ಒಂದು ನೈತಿಕ ಪರಂಪರೆ. ಮಾತಿಗೆ ತಪ್ಪಿ ನಡೆದಾಗ ಮಹಾಭಾರತವೇ ಘಟಿಸಿದೆ ನಮ್ಮ ನೆಲದಲ್ಲಿ. ಮಾತಿನ ಭರದಿ ಕೊಯ್ದ ಮೂಗು ಮರು ಜೋಡಿಸಲಾಗದು. ಶಿವ ಸಿಟ್ಟಲ್ಲಿ ಗಣೇಶನ ರುಂಡ ತುಂಡರಿಸಿದ ಮತ್ತೆ ಗಜೇಂದ್ರನ ಮೊಗವನಿಟ್ಟು ಪೋಷಿಸಿದ. ಅದು ದೇವರ ಕಾಲ. ನಮ್ಮದು ಮಾನವರ ಕಾಲ! ಪ್ಲಾಸ್ಟಿಕ್ ಸರ್ಜರಿಯ ಮಾತೆಂದರು ಅದು ದುಬಾರಿಯದು. ಮಾತಾಡಿ ಮಾನದ ಜೊತೆ ಧನಕನಕವನ್ನು ಕಳಕೊಳ್ಳುವುದೇ?! ಅಂದು ಮಾತೇ ಮಂತ್ರ ಶಾಸನವಾಗಿದ್ದ ಕಾಲವಿತ್ತು. ಇಂದೆಲ್ಲಾ ಮಾತ ಮರೆತು ಮೆರೆವವರದ್ದೇ ಕಾಲ. ಆದರು ಮಾತಿಗೆ ಮಹತ್ವ ತಂದವರು ಎಲ್ಲಾ ರಂಗಗಳಲ್ಲಿದ್ದಾರೆ.

ಅಂದು ಪಾಂಡವರು ಹದಿನಾಲ್ಕು ವರ್ಷದ ವನವಾಸ ಹಾಗು ವರ್ಷದ ಅಜ್ಞಾತವಾಸ ಮುಗಿಸಿ ಹಿಂತಿರುಗಿ ಹಸ್ತಿನಾವತಿಗೆ ಬರಲು ಉತ್ಸುಕರಾದಾಗ, ಅವರಿಗೆ ಐದು ಗ್ರಾಮಗಳಲ್ಲ ಸೂಜಿಮೊನೆಯಷ್ಟು ಜಾಗ ನೀಡಲಾರೆ ಎಂದನು ದುಷ್ಟದುರ್ಯೋಧನ.ಕಪಟದ್ಯೂತದಲ್ಲಿಧರ್ಮಜ ತನ್ನ ಸಮೇತ ರಾಜ್ಯ ಕೋಶ ಸೋದರರ ಸಮೇತ ಪತ್ನಿಯನ್ನೇ ಸೋತಾಗ ಮಾತಿನ ನಿಯಮದಂತೆ ಅನಿವಾರ್ಯ ವನವಾಸಕ್ಕೆ ಹೋದರು. ಅಜ್ಞಾತ ಕಾಲ ಕಳೆದು ಮರಳಿ ಬಂದಾಗ ಅವರ ರಾಜ್ಯ ಇಂದ್ರಪ್ರಸ್ಥ ನೀಡಬೇಕಾದ್ದು ಧರ್ಮವಾಗಿತ್ತು. ಮೊದಲೇ ಮಾಡಿಕೊಂಡ ಯಥೋಚಿತ ನುಡಿ ಒಡಂಬಡಿಕೆಯಂತೆ ನಡೆವ ರೀತಿಯಾಗಿತ್ತು. ಆದರೆ ಸಾಮ್ರಾಜ್ಯದಾಹಿ ಅಧರ್ಮಿ ಉರಗಪತಾಕ ಧುರ್ಯೋಧನ ಒಪ್ಪಲಿಲ್ಲ. ಅಜ್ಞಾತವಾಸದಲ್ಲೇ ಪಾಂಡವರ ಕಂಡುಹಿಡಿದು ದ್ಯೂತದ ಮಾತ ಶಾಸನದಂತೆ ಪುನಃ ವನವಾಸಕ್ಕೆ ಕಳಿಸುವ ದುಷ್ಟ ಎಣಿಕೆ ಅವನದಾಗಿತ್ತು. ಅದಕ್ಕಾಗಿ ಶತಪ್ರಯತ್ನ ಮಾಡಿದ್ದು ವ್ಯರ್ಥವಾಯಿತು. ದುಷ್ಟರ ಸ್ವಾರ್ಥ ಯೋಜನೆಗಳು ಎಂದು ಸಫಲವಾಗಲಾರವು. ಶಿಷ್ಟರ ಸಾಮಾನ್ಯ ಕೆಲಸಗಳು ಎಂದು ಹುಸಿಯಾಗಲಾರವು ಎಂಬುದಕ್ಕೆ ಕೌರವ ಪಾಂಡವರೇ ಸಾಕ್ಷಿ.

ಕ್ಷತ್ರಿಯರ ಛಲವೇ ಅಂತದ್ದು. ಯುದ್ಧ ಮತ್ತು ದ್ಯೂತಕ್ಕೆ ಯಾರೇ ಎಲ್ಲಿಗೇ ಕರೆದರು ಇಲ್ಲ ಅನ್ನದ ಛಾತಿ ಅವರದ್ದು. ಶಕುನಿಯ ವಕ್ರಬುದ್ಧಿ ಗೊತ್ತಿದ್ದು ಪಾಂಡವ ಜೇಷ್ಠ ಹಿಂದೆ ಸರಿಯದೆ ದ್ಯೂತದ ಬಲೆಗೆ ಬಲಿಯಾದ. ಒಮ್ಮೆ ಸೋತು ಭೀಷ್ಮದ್ರೋಣರ ಮಾತಿಗೆ ತಲೆಬಾಗಿ ಬಂದ ರಾಜ್ಯ ಪಡೆದು ಮರಳುವ ಸನ್ನಾಹದಲ್ಲಿದ್ದ ಯುಧಿಷ್ಠಿರನ ಮಾತಲ್ಲೇ ಮತ್ತೆ ಕೆಣಕಿ ದ್ಯೂತಕ್ಕೆ ಅಣಿಯಾಗುವಂತೆ ಮಾಡಿದ್ದು ಗಾಂಧಾರ ಶಕುನಿ. ಅವನ ವಿಪತ್ತಿಗೆ ಆಹ್ವಾನ ನೀಡುವ ನುಡಿಗಳಿಗೆ ಕಿವಿಗೊಡದೆ ನಡೆದಿದ್ದರೆ ಭಾರತದ ಕತೆಯೇ ಬೇರೆಯಾಗುತ್ತಿತ್ತು. ಆದರೆ ಹೇಳಿದೆನಲ್ಲ ಯುದ್ಧ ಮತ್ತು ದ್ಯೂತ ಕ್ಷತ್ರಿಯರ ದೌರ್ಬಲ್ಯವೂ ಹೌದು ಬಲವೂ ಹೌದು. ಕಾಲು ಕೆರೆದು ಕರೆದಾಗ ಕಾಲ್ಮುರಿದು ಎದೆಬಗೆಯುವಂತೆ ಮುನ್ನುಗ್ಗುವವರೇ ಕ್ಷತ್ರಿಯ ವೀರಾಗ್ರಣಿಗಳು. ಅಂತೆಯೇ ಧರ್ಮಜನದು ಧರ್ಮ ಸಂಕಟವೇ. ಜೂಜು ಅಂದಿನ ಕಾಲಕ್ಕೆ ಧರ್ಮ. ಇಂದಿಗೆ ಅಧರ್ಮ! ಕಾಲಕ್ಕೆ ಹೊಂದಿ ನಡೆಯುವವರದೇ ಬದುಕಿನ ಧರ್ಮ. ಕಾಲ ಮೀರಿ ನಡೆದವರು ಕಾಣೆಯಾಗುವುದು ಕಾಲನ ಮರ್ಮ. ಧರ್ಮಜನು ಗಾಂಧಾರನ ಮಾತಿಗೆ ಮೌನವಾದ ಮತ್ತೆ ದ್ಯೂತದ ದಾಳವಾದ ಆತ್ಮವನ್ನುಳಿದು ಎಲ್ಲವ ಕಳೆದುಕೊಂಡು ಕೌರವನ ದಾಸನಂತಾದ.

ಪಾಂಚಾಲಿಯ ಮಾನ ರಕ್ಷಣೆಯನ್ನು ಮಾಡಲಾಗದ ಧರ್ಮ ಸಂಕಟಕ್ಕೆ ಪಾಂಡವರಾದಿಯಾಗಿ ಕುರುಕುಲತಿಲಕ ಭೀಷ್ಮರು ಒಳಗಾದರು. ಗೆದ್ದವನದೇ ಸ್ವತ್ತು ಸೋತವನದೆಲ್ಲ! ದ್ವಾಪರದ ಮಹಾಭಾರತದಿ ಆದದ್ದು ಅದೇ. ಧರ್ಮಜ ಅಂದು ಮಾತು ತಪ್ಪಿದ್ದರೆ ಅವನ ತಮ್ಮ ಭೀಮನ ಒಂದು ಘರ್ಜನೆಯೇ ಸಾಕಿತ್ತು ದುರ್ಯೋಧನನ ಮದವಡಗಿಸಲು. ಶಕುನಿಯ ಕುತಂತ್ರ ಹೊಸಕಿ ಹಾಕಲು. ಆಗ ಕುರುಕ್ಷೇತ್ರ ಯುದ್ಧ ಘಟಿಸುವುದೇ ಅಗತ್ಯವಿರಲಿಲ್ಲ. ಆದರೆ ಮಾತಿನ ಧರ್ಮಕ್ಕೆ ಬೆಲೆಕೊಟ್ಟ ಯುಧಿಷ್ಠಿರ. ಅಣ್ಣನ ಹಿರಿತನಕ್ಕೆ ಬೆಲೆಕೊಟ್ಟರು ಅನುಜರೆಲ್ಲ. ದ್ರೌಪದಿಯೂ ಪತಿಯ ಮಾತಿಗೆ ಮನ್ನಣೆಯನಿಟ್ಟು ಸುಮ್ಮನಿದ್ದುಣಟಿಜಜಜಿಟಿಜಜ ಇದ್ದೂ ಕುದ್ದು ಕಡೆಗೆ ಕೃಷ್ಣನ ಆಸರೆಗೆ ಆಲಾಪಿಸಿದಳು.

ಕುಲದ ಹಿರಿಯರ ವಿವೇಕದ ಮಾತ ಮೀರಿ ದ್ರೌಪದಿಯ ಶ್ರೀಮುಡಿಗೆ ಕೈಯಿಟ್ಟು ದುಶ್ಯಾಸನನು ಭವಿಷ್ಯದ ನಾಶಕ್ಕೆ ಮುನ್ನುಡಿ ಬರೆದನು. ಕೃಷ್ಣನ ಸಂಧಾನದ ಮಾತುಗಳಿಗೆ ಒಲಿಯದೆ ದುರ್ಯೋಧನ ದೇವಕಿಸುತನ ಬಂಧಿಸುವ ಉದ್ಧಟತನ ತೋರಿ ತನ್ನ ಸಾವನ್ನೇ ಮೈಮೇಲೆ ಎರಿಕೊಂಡ. ದ್ಯೂತ ಗೆದ್ದವರಿಗೆ ಯುದ್ಧ ಗೆಲ್ಲುವುದು ದೊಡ್ಡದೇ? ಶಕುನಿಯ ಮಾತುಗಳಿಗೆ ಕುರುಪತಿಯ ತನುಮನವೇ ಬಾಗಿ ಬಳುಕಿತ್ತು. ಕಡೆಗೆ ಯುದ್ಧದಿ ಕುರುಪತಿಯು ಉರು ಉಳುಕಿ ಎದೆ ಕಲಕಿ ಪ್ರಾಣ ಕಳೆದುಕೊಳ್ಳುವಾಗ ಪ್ರಲಾಪಿಸುವ ಮಾತುಗಳಿಗೆ ಯಾವ ಗಳಿಕೆ ಬೆಲೆಯೂ ಇರಲಿಲ್ಲ.

ಇತಿಹಾಸವೇ ಹೀಗೆ ಯಾವತ್ತು ಧರ್ಮ ಅಧರ್ಮಗಳ ನೀತಿ ಅನೀತಿಗಳ ಜೋಡಿಯಾಗೆ ಹುಟ್ಟಿಸುತ್ತದೆ. ಉದ್ದೇಶ ಅಧರ್ಮ ಧರ್ಮವಾಗಲೆಂದೇ ಇರುತ್ತದೆ. ಆದರೆ ಅಧರ್ಮ ಬದಲಾಗದೇ ನಾಶವಾಗೇ ಹೋಗುತ್ತದೆ. ಹೋಗುವ ಬರದಲ್ಲಿ ಒಂದಷ್ಟು ಧರ್ಮದ ಬೇರುಗಳ ಅಲ್ಲಾಡಿಸಿ ಹೋಗುತ್ತದೆ. ಮತ್ತೆ ಮತ್ತೆ ಈ ಭುವಿಯ ಮೇಲೆ ಈ ನಾಟಕ ಇದ್ದದ್ದೆ. ಹಿರಣ್ಯಕಶಿಪುವಿಗೆ ಪ್ರಹ್ಲಾದನ ಕೂಡೆ ನರಸಿಂಹ. ಬಲಿಗೆ ವಾಮನ. ರಾವಣನಿಗೆ ರಾಮ. ಪೂತನೀ ಅಘಾಸುರ ಬಕಾಸುರ ಕಂಸರಿಗೆ ಕೃಷ್ಣ. ದುರ್ಯೋಧನನಿಗೆ ಧರ್ಮರಾಯ ಮತ್ತು ಸೋದರರು. ಅಂಗುಲಿಮಾಲನಿಗೆ ಬುದ್ಧ. ಇಲ್ಲೆಲ್ಲ ಯೋಗ್ಯ ನೀತಿಯ ಬದುಕಿಗಾಗಿ ಮಾತುಗಳ ಮಂಥನ ಸಂಘರ್ಷ ನಡೆದಿದೆ. ಮಾತ ಕೇಳದ ಮತಿಗೇಡಿಗಳ ಅವಸಾನಕ್ಕೆ ಯುದ್ಧಗಳು ನಡೆದಿವೆ.

ಕಳೆದ ಶತಕದ ನಮ್ಮ ಕಾಲದ ಮಹಾಯುದ್ಧಗಳು. ಈಗಿನ ಉಕ್ರೇನ್ ರಷ್ಯಾ ಸಮರ. ಚೀನಾದ ದಕ್ಷಿಣ ಸಮುದ್ರ ಸಾಮ್ರಾಜ್ಯದಾಹ, ಕಾಶ್ಮೀರದಲ್ಲಿನ ಧರ್ಮದ ಹೆಸರಿನಲ್ಲಿನ ರಕ್ತಪಾತಗಳು. ಶೋಷಣೆ ಹೆಸರಿನಲ್ಲಿ ಆಗಾಗ ಬೊಬ್ಬಿರಿವ ನಕ್ಸಲೀಯರು. ನಾಡು ನುಡಿ ಜಲದ ಹೆಸರಿನಲ್ಲಿ ರಾಜ್ಯಗಳ ಮಾತಿನ ಭರಾಟೆಗಳು. ಇವೆಲ್ಲ ಯಾವು ಸಂಭವಿಸಬೇಕಿರಲಿಲ್ಲ. ಆದರೆ ಇಲ್ಲೆಲ್ಲ ಹಲಕೆಲವು ನಂಬಿಕೆಯ ತಮ್ಮದೇ ಆದ ಹಿತಾಸಕ್ತಿಗಳ ಅಜೆಂಡಾಗಳ ಸಿದ್ಧಾಂತಗಳ ಪಂಥಗಳ ಊಳಿಗಕ್ಕೆ ಕಾದಾಡದೇ ವಿಧಿಯಿಲ್ಲ ಎಂಬಂತಾಗಿದೆ.

ಜಗದ್ಗುರು ಕೃಷ್ಣನಿಂದ ಮಹಾತ್ಮ ಗಾಂಧಿಯವರೆಗು ಮಾತಿನಿಂದಲೇ ಎಲ್ಲ ಸಮಸ್ಯೆಗಳ ಬಗೆಹರಿಸುವ ವಿಧಾನಗಳ ತಿಳಿಹೇಳಿದರು ಕೇಳದ ಜನನಾಯಕರು ಇರುವವರೆಗೆ ಮಾತುಗಳು ಕೇವಲ ಬಡವನ ಕೋಪ ದವಡೆದೆ ಮೂಲ ಎಂಬಂತಾಗಿವೆ. ಬಡ ದೇಶ ನಾಡುಗಳ ಕೂಗು ಮುಗಿಲು ಮುಟ್ಟದ ಗುಬ್ಬಚ್ಚಿಯ ಆರ್ತನಾದದಂತಾಗಿವೆ.

ಉಳ್ಳವರ ಮಾತಿಗೆ ಯಾವತ್ತು ಜೈಕಾರ. ಇಲ್ಲದವರ ಮಾತು ಯಾವತ್ತೂ ತಿರಸ್ಕಾರ. ಧರ್ಮದ ವಿಚಾರದಲ್ಲು ಅಸಹಾಯಕರಿಗೆ ವಿಳಂಬ ನ್ಯಾಯವೇ. ಜಗತ್ತು ಯಾವತ್ತೂ ಶಕ್ತಿಯೆಡೆಗೆ ವಾಲುತ್ತದೆ. ಮಾತಿನ ಬಲ ವ್ಯಕ್ತಿ ಇರುವ ಸ್ಥಾನ ಮಾನ ಮರ್ಯಾದೆಯ ಮೇಲೆ ಅವಲಂಬಿತವಾಗಿರುತ್ತದೆ. ಧರ್ಮ ನೀತಿಯಾಚರಣೆಯ ಯೋಗ್ಯ ವ್ಯಕ್ತಿಯೇ ಆದರು ಕೌಟುಂಬಿಕ ಬಂಧುಬಳಗದ ಶಕ್ತಿಯೋ; ಅಧಿಕಾರ ಹಣ ಆಸ್ತಿಯ ಶಕ್ತಿಯೋ; ಧಾರ್ಮಿಕ ಶೈಕ್ಷಣಿಕ ರಾಜಕೀಯ ಶಕ್ತಿಯೋ ಹಿನ್ನೆಲೆ ಮುನ್ನೆಲೆಯಲ್ಲಿ ಇರಬೇಕು. ಆಗ ಮಾತು ತತ್ ಕ್ಷಣವೇ ವಿಶ್ವವಾಣಿಯಾಗುತ್ತದೆ. ಶಕ್ತಿಯಿಲ್ಲದವನ ಧರ್ಮದ ಮಾತು ಒಣರೋಧನವಾಗುತ್ತದೆ.

ಭೀಷ್ಮ ವಿಧುರ ಕೃಷ್ಣರಿಗಿಂತ ಧರ್ಮ ಅರಿತವರಿಲ್ಲ. ಅವರ ಮಾತು ಕೌರವರಿಗೆ ಪಥ್ಯವಾಗಲಿ ಲ್ಲ. ಅವರೆಷ್ಟೇ ಆದರು ಊಳಿಗದವರೆಂದು! ಧರ್ಮವೂ ತನ್ನ ಜಯಕ್ಕಾಗಿ ಕಾದಾಡಬೇಕಾಯಿತು. ನರಸಿಂಹ ಬಲಿ ಪರಶುರಾಮ ರಾಮ ಕೃಷ್ಣ ಬುದ್ಧ ಕಲ್ಕಿ ಒಳಿತಿಗೆ ಸಂಕೇತಗಳು. ಐತಿಹಾಸಿಕವಾಗಿಯೋ ಪೌರಾಣಿಕವಾಗಿಯೋ ಈ ಎಲ್ಲ ಪಾತ್ರಗಳು ಮನುಕುಲಕ್ಕೆ ಒಳಿತಾದ ಮಾತುಗಳ ಮೂಲಕ ಒಳಿತಿನ ಜೀವನದ ಪ್ರತೀಕಗಳಾಗಿವೆ.

ಮಾತೆಂಬುದು ಜ್ಯೋತಿರ್ಲಿಂಗ. ಮಾತುಗಳು ಕೂಡಿದರೆ ನುಡಿ ಮಾತುಗಳು ತಾಕಿದರೆ ಕಿಡಿ ಎಂಬುದು ಯಾವತ್ತು ಸತ್ಯ. ಸತ್ಯವುಳ್ಳ ಮಾತಿಗೆ ಸತ್ವ ಬರಲು ತಾಳಬೇಕು. ತಾಳುವ ಮನುಷ್ಯರ ಮಾತಿನ ಮರ್ಮ ಯಾವಾಗಲು ಸತ್ವಯುತವಾಗಿ ಲೋಕಧರ್ಮ ಉನ್ನತಿಯಾಗುವುದು.




» ಲೇಖನ
ಟಿ.ಪಿ.ಉಮೇಶ್,
ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರು, ತುಪ್ಪದಹಳ್ಳಿ, ಹೊಳಲ್ಕೆರೆ .ತಾ.
9008461178

# ಯೋಗ ಪದವು ಯುಜ್ ಎಂಬ ಸಂಸ್ಕೃತ ದಾತುವಿನಿಂದ ಹುಟ್ಟಿದ ಪದ

» ಚಿತ್ರದುರ್ಗ

ಬೆಳಗಾವಿ ಕೆ ಎಲ್ ಇ ವಿದ್ಯಾಸಂಸ್ಥೆಯ ಡಾ. ಅವಿನಾಶ ಮಾತನಾಡಿ ಯೋಗ ಪದವು ಯುಜ್ ಎಂಬ ಸಂಸ್ಕೃತ ದಾತುವಿನಿಂದ ಹುಟ್ಟಿದ ಪದ. ಇದರ ಅರ್ಥ ಕೂಡುವುದು ಅಥವಾ ಸಮರಸಕೊಳ್ಳುವುದು. ಶಾರೀರಕ ವ್ಯಾಯಾಮಕ್ಕೆ ಯೋಗ ಎಂದು ಕೊಳ್ಳುವುದು ಒಂದು ಅಂಶ. ಮನಸ್ಸಿನ ಸ್ಥಿರತೆಗೆ ಆರೋಗ್ಯ ಮುಖ್ಯ, ಆರೋಗ್ಯಕ್ಕೆ ಯೋಗದ ಅವಶ್ಯಕತೆ ಹೆಚ್ಚಾಗಿದೆ. ಜೀವನ ಶೈಲಿಯಿಂದ ರೋಗ ಹೆಚ್ಚು ಬರುವ ಕಾರಣ ದೇಹದಲ್ಲಿ ಚೈತನ್ಯ, ಧೃಡತೆ ಹೊಂದುವುದಕ್ಕೆ ಶಾರೀರಕ ವ್ಯಾಯಾಮ ಅಗತ್ಯ. ಬಸವಾದಿ ಶಿವಶರಣರು ಪ್ರತಿಪಾದಿಸಿದ್ದು ಕೂಡಾ ಒಂದು ಯೋಗ ಆ ಯೋಗವನ್ನು ಶಿವಯೋಗ ಲಿಂಗಾಂಗ ಯೋಗ ಎಂದು ಕರೆಯುತ್ತೇವೆ. ಯೋಗ ಪದ್ಧತಿಗಳಲ್ಲಿ ಭಕ್ತಿ ಯೋಗ ಜ್ಞಾನಯೋಗ ದ್ಯಾನಯೋಗ ಕಾಯಕಯೋಗ ಈ ಎಲ್ಲಾ ಯೋಗಗಳ ಸಮ್ಮಿಶ್ರ ರೂಪವೇ ಬಸವಾದಿ ಶರಣರ ಪ್ರತಿಪಾದಿಸುವ ಶಿವಯೋಗ.



ತೋಂಟದ ಸಿದ್ಧಲಿಂಗೇಶ್ವರರು ಅಷ್ಟಾಂಗ ಯೋಗಗಳಲ್ಲಿ ಮೀರಿದ್ದು ಶಿವಯೋಗ ಎಂದಿದ್ದಾರೆ. ಮುರುಘಾಮಠ ಶಿವಯೋಗವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ ಕೀರ್ತಿ ಪಡೆದಿದೆ. ಶಿವಯೋಗದಲ್ಲಿ ಮೂರು ರೀತಿಯಾದ ಲಿಂಗದ ಪರಿಕಲ್ಪನೆ ಇದೆ. ಇಷ್ಟ ಲಿಂಗ ಪ್ರಾಣ ಲಿಂಗ ಭಾವ ಲಿಂಗ ಇಷ್ಟ ಲಿಂಗವೆಂದರೆ ಅಂಗೈಯಲ್ಲಿರುವುದು, ದೇಹದಲ್ಲಿ ದರಿಸುವುದು. ಪ್ರಾಣ ಲಿಂಗ ವೆಂದರೆ ನಮ್ಮಲ್ಲಿಯೇ ಸುತ್ತವಾಗಿರುವಂತಹ ಶಕ್ತಿ ಅದನ್ನು ಉದ್ದೀಪನ ಮಾಡಿಕೊಳ್ಳಬೇಕು. ಅದು ಇಷ್ಟ ಲಿಂಗ ಪೂಜೆಯಿಂದ ಸಾಧ್ಯ. ಇಷ್ಟ ಲಿಂಗಕ್ಕೆ ಇಂದು ಪತ್ರೆ ಅಭಿಷೇಕ ಮಾಡಿ ಪೂಜಿಸುವುದು ಯೋಗವಲ್ಲ, ಅರಿವಿನಲ್ಲಿ ಅಣುವಾಗಿ ಜಗದಗಲ ಮುಗಿಲಗಲ ಆಗಿರುವಂತಹ ಜ್ಯೋತಿಯನ್ನು ಚುರುಕಾಗಿಸಿಕೊಂಡು ನಮ್ಮ ಇಷ್ಟಲಿಂಗದಲ್ಲಿ ತಂದುಕೊಂಡಿಮನಸ್ಸಿನಲ್ಲಿರುವಪ್ರಾಣಲಿಂಗದ ಅನು ಸಂಧಾನ ಗೈಯುತ್ತಾ ಭಾವ ಲಿಂಗದ ತೃಪ್ತಿಯನ್ನು ಅರ್ಪಿಸಿ ಶಿವಯೋಗ ಮಾಡಿದರೆ ಪರಿಪೂರ್ಣವಾಗುತ್ತದೆ. ಆರೋಗ್ಯ ಸಮತೋಲನವಾಗಿರಲು ಶಿವಯೋಗ ಬಹಳ ಮುಖ್ಯ. ಶಿವಯೋಗದ ಬಗ್ಗೆ ವೈದ್ಯಕೀಯ ಸಂಶೋಧನೆಗಳ ಪುಸ್ತಕಗಳಿವೆ. ಇಂತಹ ಶಿವಯೋಗವನ್ನು 900 ವರ್ಷಗಳ ಹಿಂದೆಯೇ ಬಸವಾದಿ ಶರಣರು ಪರಿಚಯಿಸಿದರು.

ಶಿವಯೋಗ ಮಾಡುವ ಕ್ರಮವನ್ನು ಬಸವಣ್ಣನವರು ಜಗತ್ತಿಗೆ ಕೊಟ್ಟು ಒಬ್ಬ ಆಧ್ಯಾತ್ಮ ವಿಜ್ಞಾನಿಯಾಗಿದ್ದಾರೆ. ಕೇವಲ ಶರಣಸಂಸ್ಕೃತಿ ಉತ್ಸವದಲ್ಲಿ ಸಂದರ್ಭದಲ್ಲಷ್ಟೇ ಅಲ್ಲದೆ ಅನೇಕ ಕಮ್ಮಟಗಳ ಮೂಲಕ ಸಹಜ ಶಿವಯೋಗವನ್ನು ಮುರುಘಾಮಠ ನಡೆಸಿದೆ. ಈ ನಿಟ್ಟಿನಲ್ಲಿ ನಿತ್ಯ ಶಿವಯೋಗ ಮಾಡುತ್ತಾ ನಮ್ಮ ಜೀವನವನ್ನು ಸುಧಾರಿಸಿ ಕೊಳ್ಳೋಣ. ಜೀವನ ಏನು ಸಾಧನೆ ಮಾಡಿದರು ಅದೆಲ್ಲಾ ಒಂದು ಸೊನ್ನೆ, ಆ ಸೊನ್ನೆ ಹಿಂದೆ ಶಿವಯೋಗ ಎಂಬ ಒಂದು ಸಂಖ್ಯೆ ಇದ್ದರೆ ನೂರು, ಸಾವಿರ, ಲಕ್ಷ ಕೋಟಿ ಆಗುತ್ತದೆ. ಶಿವಯೋಗ ಜೀವನದ ಒಂದು ಅವಿಭಾಜ್ಯ ಅಂಗವಾಗ ಬೇಕು ಎಂದರು.

ದಾವಣಗೆರೆಯ ವಿರಕ್ತ ಮಠದ ಶಿವಯೋಗದ ಪ್ರಾತ್ಯಕ್ಷತೆ ವಹಿಸಿದ್ದ ಡಾ. ಬಸವಪ್ರಭು ಸ್ವಾಮೀಜಿ ಮಾತನಾಡುತ್ತಾ ಕಲ್ಲಿನಲ್ಲಿ ಬಂಗಾರ ಇದೆ, ಅದು ಕರ್ನಾಟಕ ಕೆ.ಜಿ.ಎಫ್ ಮತ್ತು ಚಿತ್ರದುರ್ಗದಲ್ಲಿ ಸಿಗುತ್ತದೆ. ಚಿತ್ರದುರ್ಗ ಚಿನ್ನದ ನಾಡು ಆಗಿದೆ. ಕಲ್ಲಿನಲ್ಲಿರುವ ಬಂಗಾರ ತೆಗೆಯ ಬೇಕಾದರೆ ಅದಕ್ಕೆ ಸಂಸ್ಕಾರ ಕೊಡಬೇಕು. ಹಾಲಿನಲ್ಲಿರುವ ತುಪ್ಪ ತೆಗೆಯಲು ಅದಕ್ಕೂ ಸಂಸ್ಕಾರ ಕೊಡಬೇಕು. ದೇವರು ಎಲ್ಲಿದ್ದಾನೆ ಎಂದರೆ ಹೊರಗಡೆ ಹೋಗಿ ಹುಡುಕಬೇಡಿ, ಮಾನವನ ಅಂತರದಲ್ಲಿ ಇದ್ದಾನೆ,

ಮನಸ್ಸಿನಲ್ಲಿ ಇದ್ದಾನೆ. ನಿನ್ನ ಅಂತರಂಗದಲ್ಲಿರುವ ದೇವರನ್ನು ನೀನು ಕಾಣಬೇಕು. ಅದನ್ನು ಕಾಣಲು ಬಸವಣ್ಣನವರು ಇಷ್ಟಲಿಂಗವನ್ನು ಕೊಟ್ಟರು ಈ ಲಿಂಗದ ಮೂಲಕ ಪ್ರತಿನಿತ್ಯ ಶಿವಯೋಗ ಮಾಡುತ್ತಾ ಬಂದರೆ ನಮ್ಮೊಳಗಿನ ದೇಹ ಭಾವ ಹೋಗಿ ಜೀವ ಭಾವ ಕಳೆದುಕೊಂಡು ಭಕ್ತಿ ಭಾವ ಬರುತ್ತದೆ. ದೇಹದ ಗುಣಗಳನ್ನು ಕಳೆದುಕೊಂಡು ಭಕ್ತಿ ಅಳವಡಿಸಿಕೊಂಡಾಗ ದೇಹವು ದೇಗುಲವಾಗುತ್ತದೆ. ದೇಹ ದೇಗುಲವಾಗ ಬೇಕೆಂದರೆ ದೇಹವನ್ನು ಸ್ವಚ್ಛ ಮಾಡಿಕೊಳ್ಳುವುದು ಸ್ನಾನ ಮಾಡುವುದಲ್ಲ, ನಮ್ಮ ಮನಸ್ಸು ಭಾವ ಸ್ನಾನ ಮಾಡ ಬೇಕು ಅದು ನಿಜವಾದ ಸ್ನಾನ, ಮನಸ್ಸಿನಲ್ಲಿರುವ ಕಲ್ಮಶ ಭಾವದಲ್ಲಿರುವ ಕೆಟ್ಟ ಬುದ್ಧಿ ಹೋಗಿ ಸದ್ಬುದ್ಧಿ ಬರಬೇಕು ದೇಹಕ್ಕೆ ಅಂಟಿಕೊಂಡ ಚಟಗಳನ್ನು ಕಳೆದುಕೊಳ್ಳಬೇಕು ಎಂದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T